ವಾಣಿಜ್ಯ ಪರೀಕ್ಷೆಗಳಿಗೆ ಮುಖ್ಯ ಪರೀಕ್ಷಕರನ್ನಾಗಿ ನೇಮಿಸವುದು.

೧೩೪೬ ಶ್ರೀ ಎನ್. ಟಿ. ಬೊಮ್ಮಣ್ಣ.—ಮಾನ್ಯ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ವಾಣಿಜ್ಯ ಪರೀಕ್ಷೆಗಳಿಗೆ ನಿವೃತ್ತಿ ಹೊಂದಿದವರನ್ನು ಅಧ್ಯಕ್ಷರು ಮುಖ್ಯ ಪರೀಕ್ಷಕರನ್ನಾಗಿ ನೇಮಿಸಲು ಅವಕಾಶವಿದೆಯೇ ?

ಆ) ಹಾಗಿದ್ದಲ್ಲಿ ೩ ವರ್ಷಗಳಲ್ಲಿ ನಿವೃತ್ತಿ ಹೊಂದಿದವರನ್ನು ಕನ್ನಡ ಬರಳಚ್ಚು ಪ್ರವೀಣ ದರ್ಜೆಗೆ ಮತ್ತು ಕನ್ನಡ ಶೀಘ್ರಲಿಪಿ ಪರೀಕ್ಷೆಗೆ ಎಷ್ಟು ಜನರನ್ನು ಅಧ್ಯಕ್ಷರು ಮುಖ್ಯ ಪರೀಕ್ಷಕರನ್ನಾಗಿ ನೇಮಿಸಿದೆ.

ಶ್ರೀ ಬಿ. ಸೋಮಶೇಖರ್ (ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಇಲ್ಲ

ಆ) ಇಲ್ಲ

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ರೈತರ ಬೇಡಿಕೆಗಳ ಬಗ್ಗೆ ಚಳುವಳಿ

ಶ್ರೀ ಕೆ. ಬಿ. ಶಾಣಪ್ಪ.—ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಅದರ ಬಗ್ಗೆ ಚರ್ಚಿಸುವುದಕ್ಕೆ.....

ಅಧ್ಯಕ್ಷರು.—ನೀವೇನಂ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ, ಅದಕ್ಕೆ ಅನುಮತಿಯನ್ನು ನಿರಾಕರಣೆ ಮಾಡಿದ್ದೇನೆ.

ಶ್ರೀ ಕೆ. ಬಿ. ಶಾಣಪ್ಪ.—ದಯವಿಮಾಡಿ ಕೇಳಬೇಕು. ೨೦ ಸಾವಿರ ಜನ ರೈತರು.....

ಅಧ್ಯಕ್ಷರು.—ರೈತರ ಬಗ್ಗೆ ಈ ಸದನದಲ್ಲಿ ನೂರಕ್ಕೆ ನೂರು ಮುಂದಿಗೆ ಕಾಳಜಿ ಇದೆ. ನಿವ್ಯಿ ನಿಲುವಳಿ ಸೂಚನೆಗೆ ಅನುಮತಿಯನ್ನು ನಿರಾಕರಣೆ ಮಾಡಿ ಅದನ್ನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಿದ್ದೇನೆ ಮತ್ತು ಅದನ್ನು ನಾಳೆ ಇಟ್ಟಿದ್ದೇನೆ.

ಶ್ರೀ ಕೆ. ಬಿ. ಶಾಣಪ್ಪ.—ಗಮನ ಸೆಳೆಯುವ ಸೂಚನೆಯಲ್ಲಿ ಚರ್ಚೆ ಮಾಡುವುದಕ್ಕಾಗುತ್ತದೆಯೇ?

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆ, ಈ ಬಗ್ಗೆ ಶ್ರೀಯುತರುಗಳಾದ ಆರ್. ವೆಂಕಟ ರಾಮಯ್ಯ, ಕೆ. ಹೆಚ್. ಶ್ರೀನಿವಾಸ್ ಹಾಗೂ ಬಿ, ಎಸ್. ಯಡಿಯೂರಪ್ಪನವರು ಸರ್ಕಾರದ ಗಮನ ಸೆಳೆಯಬಹುದು.

ಗಮನ ಸೆಳೆಯುವ ಸೂಚನೆ

೧, ಕೋಲಾರ ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕುಗಳಲ್ಲಿ ಅತಿವ ದೃಷ್ಟಿಯಿಂದ ಕೋಟ್ಯಾಂತರ ರೂಪಾಯಿಗಳ ಬೆಳೆಗಳಿಗೆ ಹಾನಿಯಾಗಿರುವುದು

ಶ್ರೀ ಬಿ. ಎಸ್ ಯಡಿಯೂರಪ್ಪ (ಶಿಕಾರಿಪುರ) —ಮಾನ್ಯ ಅಧ್ಯಕ್ಷರೆ. ಕರ್ನಾಟಕದಾದ್ಯಂತ ಮುಖ್ಯವಾಗಿ ಕೋಲಾರ ಜಿಲ್ಲೆ, ಶಿವಮೊಗ್ಗ ಜಿಲ್ಲೆಯಲ್ಲಿನ ಭದ್ರಾವತಿ ಮತ್ತಿತರ ಕಡೆಗಳಲ್ಲಿ ಅತೀವೃಷ್ಟಿ ಮತ್ತು ಆಲಿಕಲ್ಲು ಮಳೆಯಿಂದ ಕೋಟ್ಯಾಂತರ ರೂಪಾಯಿಯ ಬೆಳೆಗಳಿಗೆ ಮತ್ತು ಜಾನುವಾರುಗಳಿಗೆ ಆಗಿರುವ ನಷ್ಟದ ಬಗ್ಗೆ ಮಾನ್ಯ ಕಂದಾಯ, ಯೋಜನಾ ಹಾಗೂ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೆ, ದಿನಾಂಕ ೨೪ ಮತ್ತು ೨೫-೪-೧೯೮೮ರಂದು ಕೋಲಾರ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಆಲಿಕಲ್ಲು ಮಳೆಯಿಂದ ಬೆಳೆಗೆ ಹಾನಿ, ಜಾನುವಾರುಗಳಿಗೆ ಹಾನಿ ಉಂಟಾಗಿರುವುದು ಸರಕಾರದ ಗಮನಕ್ಕೆ ಬಂದಿರುತ್ತದೆ.

೨ ಸ್ಥಳೀಯ ಅಧಿಕಾರಿಗಳ ವರದಿಯಂತೆ, ಕೋಲಾರ ಜಿಲ್ಲೆಯ ಚಿಂತಾಮಣಿ ಹಾಗೂ ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ಆಲಿಕಲ್ಲು ಮಳೆಯಿಂದ ಸುಮಾರು ೬೫೬ ಎಕರೆ ಪ್ರದೇಶದಲ್ಲಿ ಭತ್ತ, ರೇಷ್ಮೆ ಮತ್ತು ಟೊಮೆಟೊ ಬೆಳೆಗೆ ನಷ್ಟ ಉಂಟಾಗಿದೆ. ನಷ್ಟದ ಅಂದಾಜು ಸುಮಾರು ರೂ ೪೪.೨೨ ಲಕ್ಷ, ಚಿಂತಾಮಣಿ. ತಾಲ್ಲೂಕಿನಲ್ಲಿ ಮಾತ್ರ ೧೫೭ ಕುರಿಗಳು ಸತ್ತಿದ್ದು ಹಾಗೂ ೧೫೯ ಕುರಿಗಳು ಕಾಣೆ ಆಗಿವೆ. ಇವುಗಳ ಅಂದಾಜು ಬೆಲೆ ಸುಮಾರು ರೂ. ೭೦,೦೦೦.೦೦ ಎರಡೂ ತಾಲ್ಲೂಕುಗಳಲ್ಲಿ ನಷ್ಟ ಕ್ಕೊಳಗಾದ ಕುಟುಂಬಗಳ ಸಂಖ್ಯೆ ೬೬೪. ಈ ಪೈಕಿ ೨೯೫ ಕುಟುಂಬಗಳ ತಲಾ ವಾರ್ಷಿಕ ವರಮಾನ ರೂ. ೩,೫೦೦–೦೦ ಕ್ಕಿಂತ ಕಡಿಮೆ ಇರುತ್ತದೆ. ಈ ಕುಟುಂಬಗಳಿಗೆ ಈಗಾಗಲೇ ನಿಯಮಾವಳಿಗಳನುಸಾರ ಸಂಬಂಧಪಟ್ಟ ತಹಸೀಲ್ದಾರರು ತಲಾ ರೂ. ೩೦೦.೦೦ ರಂತೆ ಪರಿಹಾರ ನೀಡಿರುತ್ತಾರೆ.

೩ ಇದೇ ರೀತಿ ಶಿವಮೊಗ್ಗ ಜಿಲ್ಲೆಯಲ್ಲಿಯೂ ಸಹ ದಿನಾಂಕ ೨೪–೪–೮೮ ರಂದು ಭಾರಿ ಮಳೆ ಹಾಗೂ ಆಲಿಕಲ್ಲು ಮಳೆ ಉಂಟಾಗಿದ್ದು, ಭದ್ರಾವತಿ ತಾಲ್ಲೂಕಿನ ೩೪ ಗ್ರಾಮಗಳು ಮಂತ್ತು ಶಿವಮೊಗ್ಗ ತಾಲ್ಲೂಕಿನ ೧೦ ಗ್ರಾಮಗಳು ಹಾನಿಗೊಳಗಾಗಿರುತ್ತವೆ. ಸುಮಾರು ೭೪೧೦ ಎಕರೆ ಜಮೀನಿನಲ್ಲಿ ಬೆಳೆ ನಾಶವಾಗಿದ್ದು, ಅದರ ಮೊತ್ತ ರೂ. ೨.೮೧ ಕೋಟಿ ಅಂದಾಜು ಇರುತ್ತದೆ. ೧೦೫ ಜಾನುವಾರುಗಳು ಸಹ ಸತ್ತಿರುತ್ತದೆ. ಒಟ್ಟು ೩೮೭೨ ಕುಟುಂಬಗಳು ನಷ್ಟ ಹೊಂದಿರುತ್ತಾರೆ, ಈ ಪೈಕಿ ೧೦೨೧ ಕುಟುಂಬಗಳ ವಾರ್ಷಿಕ ವರಮಾನವು ರೂ. ೩,೫೦೦–೦೦ ಕ್ಕಿಂತ ಕಡಿಮೆ ಇದ್ದು, ಈ ಎಲ್ಲಾ ಕುಟುಂಬ ಗಳ ಒಟ್ಟು ೨೬.೨೭ ಲಕ್ಷ ರೂ. ಗಳ ನಷ್ಟವನ್ನು ಅನುಭವಿಸಿರುತ್ತಾರೆ.

೪ ಜಾನುವಾರುಗಳನ್ನು ಕಳೆದು ಕೊಂಡ ರೈತರುಗಳಿಗೆ ತ್ವರಿತ ಪರಿಹಾರ ನೀಡುವುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಆಶ್ವಾಸನೆ ನೀಡಿದ ಪ್ರಕಾರ, ಈಗಾಗಲೇ ಜಿಲ್ಲಾಧಿಕಾರಿಗಳು ರೂ.೪೦,೦೦೦–೦೦ ಗಳನ್ನು ಮೀಸಲಾಗಿಟ್ಟಿದ್ದು ಅಂತಹ ರೈತರುಗಳಿಗೆ ಪರಿಹಾರ ನೀಡುವ ದಿಶೆಯಲ್ಲಿದ್ದಾರೆ.

೫ ಶಿವಮೊಗ್ಗ ಜಿಲ್ಲೆಯಲ್ಲಿ ನೈಸರ್ಗಿಕ ವಿಕೋಪಗಳ ಸಮಿತಿಯನ್ನು ಸ್ಥಳೀಯವಾಗಿ ಹೊಸದಾಗಿ ರಚಿಸಿಕೊಂಡಿದ್ದಾರೆ. ಸದರಿ ಸಮಿತಿಯು ದಿನಾಂಕ ೭–೫–೧೯೮೮ರಂದು ಸಭೆ ಸೇರಿ ಈ ಕೆಳಕಂಡಂತೆ ಕ್ರಮ ತೆಗೆದುಕೊಳ್ಳಲು ಯೋಚಿಸಿದೆ.

ಅ) ನೊಂದ ರೈತರುಗಳು ಪಡೆದಿರುವ ಸಾಲದ ಅವಧಿಯನ್ನು ಅಂದರೆ ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವಾಗಿ ಬದಲಾಯಿಸುವುದು.

ಆ) ಬೇಕಿದ್ದ ಪ್ರಸ್ತಾವನೆಗಳಲ್ಲಿ ಹೊಸ ಸಾಲಗಳನ್ನು ಬ್ಯಾಂಕ್ ಮೂಲಕ ಮಂಜೂರು ಮಾಡು ವುದು.

ಇ) ಒಂದು ಗ್ರಾಮವನ್ನು ಒಂದು ಘಟಕವೆಂದು ಪರಿಗಣಿಸಿ, ನೊಂದ ರೈತರುಗಳಿಗೆ ವಿಮಾ ಪರಿಹಾರವನ್ನು ನೀಡಬೇಕಾಗಿ ವಿಮಾ ಕಂಪನಿಯವರನ್ನು ಕೋರುವುದು.

ಈ) ಸಂಬಂಧಪಟ್ಟ ಇಲಾಖೆಗಳು ಅಂದರೆ ಕೃಷಿ ತೋಟಗಾರಿಕೆ ಇತ್ಯಾದಿ ನಷ್ಟ ಹೊಂದಿದ ಬೆಳೆಯ ಮೌಲ್ಯವನ್ನು ನಿರ್ಧರಿಸಿ ಅಂತೆಯೇ ವಿಮಾ ಕಂಪನಿಗೆ ವರದಿಗಳನ್ನು ಕಳುಹಿಸಿ. ನೊಂದ ರೈತರಿಗೆ ಪರಿಹಾರ ದೊರಕುವ ಕ್ರಮ ತೆಗೆದುಕೊಳ್ಳುವುದು.

೬ ನೈಸರ್ಗಿಕ ವಿಕೋಪಗಳು, ಅಂದರೆ ಅಗ್ನಿ ಪ್ರವಾಹ, ಚಂಡಮಾರುತ ಇತ್ಯಾದಿಗಳಿಗೊಳಗಾಗಿ ನೊಂದವರಿಗೆ ಪರಿಹಾರ ನೀಡಲು ಈಗಾಗಲೇ ಸರಕಾರವು ನಿಯಮಾವಳಿಗಳನ್ನು ಹೊರಡಿಸಿದೆ. ಸದರೀ ನಿಯಮಾವಳಿಗಳ ಪ್ರಕಾರ, ನೊಂದ ಪ್ರತಿ ಕುಟುಂಬದವರ ವಾರ್ಷಿಕ ವರಮಾನ ರೂ. ೩,೫೦೦–೦೦ ಕ್ಕಿಂತ ಕಡಿಮೆ ಇರುವವರಿಗೆ ಗರಿಷ್ಟ ೬೦೦.೦೦ ರೂ.ಗಳ ನಗದು ಪರಿಹಾರ ಮತ್ತು ೬೦–೦೦ ರೂ. ಗಳ ಮೌಲ್ಯದ ಕಟ್ಟಡ ಸಾಮಗ್ರಿಗಳನ್ನು ನೀಡಲಾಗುತ್ತದೆ. ಜಿಲ್ಲಾಧಿಕಾರಿಗಳಂ ಸಹಾಯ ಆಯುಕ್ತರು ಮತ್ತು ತಹಶೀಲ್ದಾರರು ಪರಿಹಾರ ನೀಡುವ ಕ್ರಮ ತೆಗೆದುಕೊಳ್ಳುತ್ತಾರೆ. ಹೆಚ್ಚಿನ ಸಹಾಯ ಮಾಡಲು ನಿಯಮಗಳ ಆಡಿಯಲ್ಲಿ ಸರಕಾರ ಆಲೋಚನೆ ಮಾಡುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಮೊದಲನೆ ಸಾರಿ ಈ ರೀತಿಯಲ್ಲಿ ಪ್ರಕೃತಿ ವಿಕೋಪಕ್ಕೆ ನಮ್ಮ ರೈತರು ತುತ್ತಾಗಿದ್ದು. ಕೋಲಾರ, ಶಿವಮೊಗ್ಗ ಜಿಲ್ಲೆಯಲ್ಲಿ ಸಾಕಷ್ಟು ನಷ್ಟವನ್ನು ನಮ್ಮ ರೈತರು ಅನುಭವಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕು ಮತ್ತು ಹೊಳೆ ಹೊನ್ನೂರು ಭಾಗಗಳಲ್ಲಿ ಆಲಿಕಲ್ಲು ಮಳೆಯಿಂದ ತೆಂಗಿನ ತೋಟ

ಪೂರ್ಣ ಹಾನಿಯಾಗಿದೆ. ಹಾಗೂ ಸಂಪೂರ್ಣ ನಾಶವಾಗಿದೆ. ಇದರ ಜೊತೆಗೆ ಅಡಿಕೆ ತೋಟಗಳು ಕೂಡ ಸಂಪೂರ್ಣ ನಾಶವಾಗಿದೆ. ಭದ್ರಾವತಿಯಲ್ಲಿ ನೂರಾರು ಎಕರೆಗಳಷ್ಟು ಬೇಸಿಗೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ.

ಸುಮಾರು ೬೦೦-೭೦೦ ಜಾನುವಾರುಗಳು ಸತ್ತಿವೆ. ಒಬ್ಬ ಮನುಷ್ಯ ಸ್ಥಳದಲ್ಲೇ ಸತ್ತಿದ್ದಾನೆ. ಅದೇರೀತಿ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿ ದ್ರಾಕ್ಷಿ ಬೆಳೆ ಸಂಪೂರ್ಣವಾಗಿ ನಾಶವಾಗಿದೆ, ಟೊಮ್ಯಾಟೊ ಮತ್ತು ಹಿಪ್ಪನೇರಳೆ ಬೆಳೆ ನಾಶವಾಗಿದೆ. ಇಂಥ ಸಂದರ್ಭದಲ್ಲಿ ಸಂಬಂಧಪಟ್ಟ ರವಿನ್ಯೂ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಸರಿಯಾದ ಮಾಹಿತಿ ಸಂಗ್ರಹಿಸಿ ಸರ್ಕಾರಕ್ಕೆ ಪೂರ್ಣವರದಿ ಕೊಟ್ಟಿಲ್ಲ. ಶಿವಮೊಗ್ಗ ಜಿಲ್ಲಾ ಪರಿಷತ್ ಸಭೆಯಲ್ಲಿ ಚರ್ಚೆಯಾದಾಗ ಸಾಂಕೇತಿಕವಾಗಿ ಒಟ್ಟು ೨೨ ಸಾವಿರವೋ ೨೪ ಸಾವಿರವೋ ಪರಿಹಾರ ಕೊಡತಕ್ಕ ಪ್ರಯತ್ನ ಆಗಿದೆ. ಆದರೆ ಒಬ್ಬೊಬ್ಬ ರೈತನಿಗೇ ೧೦-೧೨ ಸಾವಿರ ರೂಪಾಯಿ ನಷ್ಟವಾಗಿದೆ. ಅಡಿಕೆ ಬೆಳೆ ನಾಶವಾಗಿದೆ ತಾವು ಗರಿಷ್ಠ ೮೦೦ ರೂಪಾಯಿ ನಗದು ಪರಿಹಾರ ಮತ್ತು ೬೦೦ ರೂಪಾಯಿನ ಕಟ್ಟಡ ಸಾಮಗ್ರಿ ಕೊಡುತ್ತೇವೆಂದು ಹೇಳಿದ್ದೀರಿ. ಬರಗಾಲಕ್ಕೆ ತುತ್ತಾದ ರೈತ ಬೇಸಿಗೆಯಲ್ಲಿ ಏನೋ ಬೆಳೆ ಬೆಳೆಯೋಣ ಎಂದು ಪ್ರಯತ್ನ ಪಟ್ಟಾಗ ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಬೆಳೆ ನಾಶವಾಗಿರುವಾಗ ನೀವು ಹೆಚ್ಚು ಸಹಾಯ ಮಾಡಬೇಕು. ತಾವೇ ಒಪ್ಪಿಕೊಂಡಿರುವಂತೆ ಶಿವಮೊಗ್ಗದಲ್ಲಿ ಮೂರೂವರೆ ಕೋಟಿ ರೂಪಾಯಿ, ಕೋಲಾರ ಜಿಲ್ಲೆಯಲ್ಲಿ ೧ ಕೋಟಿ ರೂಪಾಯಿಗಿಂತ ಜಾಸ್ತಿ ನಷ್ಟವಾಗಿದೆ. ಜಾನುವಾರುಗಳು ಹೋಗಿವೆ ಏಪ್ರಿಲ್ ೨೬ನೇ ತಾರೀಖಿಗೆ ಇದು ಆಗಿರುವುದು ಇಲ್ಲಿಗೆ ಒಂದು ತಿಂಗಳು ಕಳೆಯುತ್ತಾ ಬರುತ್ತಿದೆ. ಇಂಥ ಸಂದರ್ಭದಲ್ಲಿ ಪರಿಹಾರ ಹೆಚ್ಚು ಒದಗಿಸಬೇಕಾಗಿತ್ತು. ತಮಗೆ ರೈತರ ಬಗ್ಗೆ ಕಳಕಳಿ ಇದ್ದರೆ ತಕ್ಷಣ ಸಂಪೂರ್ಣ ಬೆಳೆ ನಾಶವಾಗಿರುವ ರೈತನಿಗೆ ೪೦೨-೫೦೦ ರೂಪಾಯಿ ಕೊಟ್ಟರೆ ಸಾಕಾಗುವುದಿಲ್ಲ. ಜಾಸ್ತಿ ಕೊಡಬೇಕು. ಮುಖ್ಯಮಂತ್ರಿಗಳ ಪರಿಹಾರನಿಧಿಯಿಂದ ಪರಿಹಾರಕೊಡಬೇಕು. ಸಂಪೂರ್ಣವಾಗಿ ಬೆಳೆನಾಶವಾಗಿರುವವರಿಗೆ ಎಷ್ಟು ನಷ್ಟವಾಗಿದೆಯೋ ಅಷ್ಟೂ ಹಣ ಸಂಪೂರ್ಣವಾಗಿ ಕೊಡಬೇಕು. ಸರ್ಕಾರಕ್ಕೆ ಈ ಹಣ ಕೊಡುವುದೇನೂ ದೊಡ್ಡದಲ್ಲ. ಪ್ರಕೃತಿ ವಿಕೋಪಕ್ಕೆ ರೈತನೂ ಕಾರಣನಲ್ಲ. ಸರ್ಕಾರವೂ ಕಾರಣವಲ್ಲ ಈ ಸಂಕಷ್ಟ ಪರಿಸ್ಥಿತಿಯಲ್ಲಿ ಸರ್ಕಾರ ಮುಂದೆ ಬರಬೇಕು. ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳಾದ ಬಸವಣ್ಣಪ್ಪನವರು ಭದ್ರಾವತಿ ತಾಲ್ಲೂಕಿನಲ್ಲಿ ಪರಿಹಾರ ಹಂಚುವುದಕ್ಕೆ ೪೦-೫೦ ಸಾವಿರ ರೂಪಾಯಿ ತೆಗೆದುಕೊಂಡು ಹೋದಾಗ ಸಾವಿರಾರು ರೈತರು ಅದು ಸಾಲುವುದಿಲ್ಲ ಎಂದು ಪ್ರತಿಭಟಿಸಿದರು. ರೈತ ಕಣ್ಣೀರಿನಲ್ಲಿ ಕೈ ತೊಳೆಯುತ್ತಾ ಇರುವ ಈ ಸಂದರ್ಭದಲ್ಲಿ ಇದು ಸಾಲುವುದಿಲ್ಲ ಎಂದು ಗಲಾಟೆ ಮಾಡಿ ಅವರನ್ನು ವಾಪಸ್ ಕಳುಹಿಸಿಕೊಟ್ಟಿದ್ದಾರೆ. ನಾವು ರವಿನ್ಯೂ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಾವು ಸ್ಥಳ ಪರಿಶೀಲನೆ ಮಾಡಿ. ತೆಂಗಿನ ತೋಟ, ಅಡಿಕೆ ಬೆಳೆ ನಾಶವಾಗಿದೆಯೋ ಇಲ್ಲವೋ, ಜಾನುವಾರುಗಳು ಸತ್ತಿದೆಯೋ ಇಲ್ಲವೋ ನೋಡಿ. ಮಾನ್ಯ ಮುಖ್ಯಮಂತ್ರಿಗಳು ಕೂಡ ಸ್ಥಳ ಪರಿಶೀಲನೆ ಮಾಡಿ ತನಿಖೆ ಮಾಡಬೇಕು. ವಿಚಿತ್ರ ರೀತಿಯಲ್ಲಿ ಪ್ರಕೃತಿ ವಿಕೋಪಕ್ಕೆ ತುತ್ತಾಗಿರುವ ರೈತನಿಗೆ ರಕ್ಷಣೆ ಕೊಡಬೇಕು. ಸಂಪೂರ್ಣವಾದ ಪರಿಹಾರವನ್ನು ಕೊಟ್ಟು ರೈತರು ಮರ್ಯಾದೆಯಿಂದ ಜೀವಿಸಲು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ತಾವು ಕೊಟ್ಟಿರುವ ಉತ್ತರವನ್ನು ನೋಡಿದರೆ ರೈತನಿಗೆ ದ್ರೋಹ ಬಗೆದಂತಾಗಿದೆ. ಇದು ಸಾಕಷ್ಟಲ್ಲ. ಈ ವಿಷಯದಲ್ಲಿ ಸರ್ಕಾರದಿಂದ ಸರಿಯಾದ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ನಾನು ಕೂಡ ಈ ಬಗ್ಗೆ ಕಾಲಿಂಗ್ ಅಟೆನ್ಷನ್ ಕಳುಹಿಸಿದ್ದೆ.

ಅಧ್ಯಕ್ಷರು —ಈಗ ವೆಂಕಟರಾಮಯ್ಯನವರು ಮಾತನಾಡಲಿ.

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಬೈರೇಗೌಡರು ಮತ್ತು ಆಗಿನ ಮಂತ್ರಿಗಳಾದ ಕೆ. ಮುನಿಯಪ್ಪನವರು ಕೋಲಾರ ಜಿಲ್ಲೆಯಲ್ಲಿ ಪ್ರವಾಸ ಮಾಡಿದೆವು. ಮುಖ್ಯವಾಗಿ ಚಿಂತಾಮಣಿ ತಾಲ್ಲೂಕು ಮತ್ತು ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ಸುಮಾರು ಒಂದು ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಸರ್ಕಾರದವರೇ ಲೆಕ್ಕ ಹಾಕಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ''ಕರ್ನಾಟಕ ಮುನ್ನಡೆ'' ಎಂಬ ಪಾಕ್ಷಿಕ ಪತ್ರಿಕೆಯಲ್ಲಿ ಬಂದಿರುವ ವಿಚಾರವನ್ನು ನಾನು ಓದುತ್ತಿದ್ದೇನೆ. ಆದರಲ್ಲಿ ಡೆಪ್ಯುಟಿ ಕಮಿಷನರ್ ಆವರ ಸ್ಟೇಟ್‌ಮೆಂಟ್ ಪ್ರಕಾರ ಏಪ್ರಿಲ್ ತಿಂಗಳ ಕೊನೇ ವಾರದಲ್ಲಿ ಸುರಿದ ಆಲಿಕಲ್ಲಿಂ ವ ಗಾಳಿಯಿಂದ ಜಿಲ್ಲೆಯ ಚಿಂತಾಮಣಿ, ಶ್ರೀನಿವಾಸಪುರ ತಾಲ್ಲೂಕಿನಲ್ಲಿ...

ಅಧ್ಯಕ್ಷರು.—ಅವರು ಓದಿ ಹೇಳಿದ್ದಾರೆ. ನೀವು ಓದಿ ಹೇಳುವ ಅವಶ್ಯಕತೆ ಇಲ್ಲ, ನಿರ್ದಿಷ್ಟವಾಗಿ ಪ್ರಶ್ನೆ ಕೇಳಿ.

ಶ್ರೀ ಎಸ್. ಪೆಂಕಟರಾಮಯ್ಯ.—ಆದರಲ್ಲಿ ೪೪ ಲಕ್ಷ ರೂಪಾಯಿ ಮೌಲ್ಯದ ಬೆಳೆ ನಷ್ಟವಾಗಿದೆ. ಜಾನುವಾರುಗಳ ನಷ್ಟವಾಗಿದೆ, ೬೨೦ ಎಕರೆಯಲ್ಲಿ ಭತ್ತ ನಷ್ಟವಾಗಿದೆ, ೧೮೬ ಕುರಿಗಳು ಸತ್ತಿವೆ, ೧೪೯ ಕುರಿಗಳು ನಾಪತ್ತೆ ಆಗಿವೆ, ನಾಲ್ಕು ಹಸುಗಳು ಸತ್ತಿವೆ ಎಂದು ಹೇಳಿದ್ದಾರೆ. ಈಗ ಡಿಸ್ಟ್ರಿಬ್ಯೂಟ್ ಮಾಡಿರುವುದು ೨ ಲಕ್ಷ ರೂಪಾಯಿಗಳು ಮಾತ್ರ. ಇದೂ ಯಾವ ತರಹ ಮಾಡಿದ್ದಾರೆ ಅಂದರೆ ೩೫೦೦ ರೂಪಾಯಿಗಿಂತ ಕಡಿಮೆ ವರಮಾನ ಯಾರಿಗೆ ಇದೆಯೋ ಅವರಿಗೆ ಮಾತ್ರ ಕೊಟ್ಟಿದ್ದಾರೆ. ಆದರೆ ೩೫೦೦ ರೂಪಾಯಿಗಿಂತ ಹೆಚ್ಚಿಗೆ ಉತ್ಪನ್ನ ಇರುವವರಿಗೂ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಕೊಡಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ದಯವಿಟ್ಟು ೩೫೦೦ ರೂಪಾಯಿ ವರಮಾನ ಇರಬೇಕೆಂದು ಏನು ಲಿಮಿಟ್ ಇದೆಯೋ ಅದನ್ನು ಜಾಸ್ತಿ ಮಾಡಬೇಕು. ಒಬ್ಬೊಬ್ಬರಿಗೆ ೮೦೦ ರೂ. ಮಾತ್ರ ಕೊಟ್ಟಿದ್ದಾರೆ. ಅದರಂತೆ ಸುಸಾರು ೨ ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದಾರೆ. ಇದರಿಂದ ನಿಜವಾಗಿಯೂ ರೈತರಿಗೆ ಸಹಾಯ ಮಾಡಿದಂತಾಗಿಲ್ಲ. ರೈತರಿಗೆ ತೊಂದರೆಯಾಗಿದೆ. ೩೫೦೦ ರೂಪಾಯಿ ಎಂದು ಏನು ಲಿಮಿಟ್ ಹಾಕಿದ್ದೀರಿ ಅದನ್ನು ತೆಗೆದು ಎಲ್ಲ ರೈತರಿಗೂ ಪರಿಹಾರ ಸಿಗುವಂತೆ ವ್ಯವಸ್ಥೆ ಮಾಡಬೇಕು. ಈ ೩೫೦೦ ರೂಪಾಯಿ ಲಿಮಿಟ್ ಯಾವಾಗ ಹಾಕಿದರೋ ನನಗೆ ಗೊತ್ತಿಲ್ಲ. ತಮಗೂ ಗೊತ್ತಿಲ್ಲ ಎಂದು ಕಾಣುತ್ತದೆ. ೨೦–೩೦ ವರ್ಷಗಳ ಹಿಂದೆ ನಿಗದಿ ಮಾಡಿದ್ದಾರೆ, ಅದನ್ನು ತೆಗೆದು ಹೆಚ್ಚಿಗೆ ವರಮಾನ ಇರುವವರಿಗೂ ಸಹಾಯ ಮಾಡಬೇಕು. ಪ್ಯಾಗ್ಡಿಮಂ ೮೦೦ ರೂಪಾಯಿ ಕೊಟ್ಟಿರುವುದು ಅನ್ಯಾಯ. ನಷ್ಟವಾಗಿರುವಷ್ಟು ಕೊಡಬೇಕು. ಇಲ್ಲದೇ ಹೋದರೆ ಸ್ವಲ್ಪ ನ್ಯಾಯವಾದ ಪರಿಹಾರವನ್ನಾದರೂ ಕೊಡಬೇಕು.

12-00 ಮಧ್ಯಾಹ್ನ

ಶಿವಮೊಗ್ಗ ಜಿಲ್ಲೆಯಲ್ಲಿ ಆಗಿರುವಂತಹ ನಷ್ಟದ ಬಗ್ಗೆ ಹಿಂದೂ ಪತ್ರಿಕೆಯಲ್ಲಿ ಮೇ ೨ರಂದು ವಿವರವಾದ ವರದಿ ಬಂದಿದೆ. ನಿನ್ನೆ ಕೂಡ ಬಂದಿದೆ.

> "3872 families affected by thunderstorm Nearly 3,872 families in 44 villages in Bhadravathi and Shimoga taluks were affected by the thunderstorm on April, 24 according to official estimates"

ಅಂತ ವರದಿ ಇದೆ. ಡಿ.ಸಿ ಯವರ ವರದಿ ಕೂಡ ಇದೆ. ಈ ಎರಡು ತಾಲ್ಲೂಕುಗಳಲ್ಲಿ ಇಷ್ಟೊಂದು ಭಾರಿ ಪ್ರಮಾಣದ ನಷ್ಟವಾಗಿದೆ, ದಯವಿಟ್ಟು ಇದನ್ನೂ ಕೂಡ ಗಮನಕ್ಕೆ ತೆಗೆದುಕೊಳ್ಳಬೇಕು. ನಿನ್ನೆ ಕೂಪ ಪತ್ರಿಕೆಯಲ್ಲಿ

> "The damage done by the hailstorm that struck parts of Shimoga and Bhadravathi areas on April, 24 has been so severe that not only have the standing crops like Paddy, Sugarcane, and banana been destroyed but the land, on which they were grown has been rendered useless"

ಎಂದು ಹೇಳಿದ್ದಾರೆ. ಈಗ ೮೦೦ ರೂಪಾಯಿಗಳ ಪರಿಹಾರವನ್ನು ಏನು ಕೊಟ್ಟಿದ್ದೀರಿ, ಇದನ್ನು ಜಾಸ್ತಿ ಮಾಡಬೇಕು. ಜೊತೆಗೆ ೩೫೦೦ ರೂಪಾಯಿಗಳ ವರಮಾನಕ್ಕಿಂತ ಕೆಳಗಡೆ ಇರುವವರು ಎಂಬುದಾಗಿ ಏನು ಆಧಾರವನ್ನಾಗಿ ಇಟ್ಟುಕೊಂಡಿದ್ದೀರಿ, ಇದು ರ್ಯಾಸನಲ್ ಆಧಾರವಲ್ಲ. ಇದನ್ನು ಆಧಾರವಾಗಿಟ್ಟುಕೊಂಡು ಪರಿಹಾರವನ್ನು ಕೊಟ್ಟಿರುವಂತಹದ್ದು ಸರಿಯಾದುದಲ್ಲ. ಇದನ್ನು ಹಿಂದೆ ಯಾವುದೋ ಕಾಲದಲ್ಲಿ ಮಾಡಿರುವಂತಹದ್ದು. ಆದ್ದರಿಂದ ರೈತನಿಗೆ ಎಷ್ಟು ನಷ್ಟವಾಗಿದೆ ಅದನ್ನು ಪೂರ್ಣವಾಗಿ ಭರ್ತಿ ಮಾಡಿಕೊಡಬೇಕು. ಇಲ್ಲದಿದ್ದರೆ ರೈತನಿಗೆ ನಿಜವಾಗಿ ದ್ರೋಹ ಮಾಡಿದಂತಾಗುತ್ತದೆ. ದಯವಿಟ್ಟು ಸ್ವಲ್ಪ ಅನುಕಂಪವನ್ನು ತೋರಿಸಿ. ಈಗ ಹಾಲಿ ಕೊಟ್ಟಿರುವಂತಹದ್ದರ ಜೊತೆಗೆ ಇನ್ನೂ ಜಾಸ್ತಿ ಪರಿಹಾರವನ್ನು ಕೊಡಬೇಕು. ೮೦೦ ರೂಪಾಯಿಗಳ

ಲಿಮಿಟ್ ಏನು ಮಾಡಿದ್ದೀರಿ. ಅದನ್ನು ಪುನಃ ಪರಿಶೀಲನೆ ಮಾಡಬೇಕು. ಇಷ್ಟು ವಿಚಾರವನ್ನು ತಮ್ಮ ಮುಂಜಾಂತರ ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಸಿ, ಬೈರೇಗೌಡ.— ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು. ಮಾನ್ಯ ಬೈರೇಗೌಡರವರೇ, ಗಮನ ಸೆಳೆಯುವ ಸೂಚನೆಯಲ್ಲಿ ಯಾರು ರುಜು ಮಾಡಿದ್ದಾರೋ ಅವರಿಗೆ ಮಾತ್ರ ಅವಕಾಶ ಕೊಡಬೇಕಾಗುತ್ತದೆ. ಬೇರೆಯವರಿಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಇದರಲ್ಲಿ ರುಜು ಮಾಡಿರುವವರು ಶ್ರೀ ಯಡಿಯೂರಪ್ಪ, ಶ್ರೀ ಆರ್. ವೆಂಕಟರಾಮಯ್ಯ, ಹಾಗೂ ಶ್ರೀ ಕೆ. ಎಚ್. ಶ್ರೀನಿವಾಸ್ ಅವರುಗಳು ನೀವು ಇದರಲ್ಲಿ ಸಹಿ ಮಾಡಿಲ್ಲ. ಆ ಕಾರಣದಿಂದಾಗಿ ನಿಮಗೆ ಅವಕಾಶ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ. — ಹಾಗಾದರೆ ನಾನು ಕಳಕಳಿಸಿದಂತಹ ಗಮನ ಸೆಳೆಯುವ ಸೂಚನೆ ಏನಾಯಿತು ? ೭–೮ ದಿವಸಗಳ ಹಿಂದೆ ಇಲ್ಲಿಯೇ ಬರೆದು ತಮಗೆ ಕಳುಹಿಸಿದ್ದೇನೆ.

ಅಧ್ಯಕ್ಷರು.— ನೀವೂ ನೋಟೀಸನ್ನು ಕೊಟ್ಟಿದ್ದರೆ ಮಾತನಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅವರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಸಿ. ಬೈರೇಗೌಡ.— ಮಾನ್ಯ ಅಧ್ಯಕ್ಷರೇ ಕೋಲಾರ ಜಿಲ್ಲೆಯಲ್ಲಿ ಆಗಿರತಕ್ಕ ನಷ್ಟದಲ್ಲಿ ಶೇ ೯೯ಷ್ಟು ನಷ್ಟ ನನ್ನ ಕ್ಷೇತ್ರದ ೨ ಹೋಬಳಿಗಳಾದ ಕೈವಾಡ ಮತ್ತು ಕಸಬಾಗಳಲ್ಲಿ ಆಗಿದೆ. ಮಳೆ ಬಂದ ದಿವಸ ನಾನು ಸ್ಥಳದಲ್ಲಿದ್ದೆ. ಆಗಿರುವಂತಹ ನಷ್ಟವನ್ನು ಕಣ್ಣಾರೆ ಕಂಡಿದ್ದೇನೆ. ಇಡೀ ಈ ಎರಡು ಹೋಬಳಿಗಳಲ್ಲಿ ನೂರಾರು ಎಕರೆಯಲ್ಲಿದ್ದಂತ ಟೊಮ್ಯಾಟೊ, ಆಲೂಗಡ್ಡೆ, ತರಕಾರಿ ಹಾಗೂ ಮಾವಿನ ಮರದಲ್ಲಿದ್ದಂತಹ ಮಾವಿನ ಹಣ್ಣುಗಳೆಲ್ಲಾ ಹಾಳಾಗಿ ಪೂರ್ತಿಯಾಗಿ ನಷ್ಟವಾಗಿದೆ. ಎಲ್ಲವೂ ನೆಲದ ಮೇಲೆ ಬಿದ್ದಿವೆ. ನೂರಾರು ಕುರಿಗಳು ಸತ್ತಿವೆ. ದಳವಾರ ಗ್ರಾಮದಲ್ಲಿ ದಿಢೀರನೆ ಬಂದ ಮಳೆಯಿಂದ ೧೫೩ ಕುರಿಗಳು ಸತ್ತಿದ್ದನ್ನು ಕಣ್ಣಾರೆ ಕಂಡಿದ್ದೇನೆ. ಅವರು ಬಹಳ ಕಷ್ಟದಲ್ಲಿ ಇರುವಂತಹ ಜನ. ಅವರಿಗೆ ಕುರಿಯನ್ನು ಸಾಕಿ ಜೀವನ ಮಾಡುವುದನ್ನು ಬಿಟ್ಟರೆ ಬೇರೆ ಅವರ ಜೀವನಕ್ಕೆ ಆಧಾರ ಇಲ್ಲ. ಆ ಜನ ಅಲ್ಪಸಂಖ್ಯಾತರಿಗೆ ಸೇರಿದಂತಹವರು. ಕೈವಾರ ಹೋಬಳಿಯ ೧೯ ಗ್ರಾಮಗಳಲ್ಲಿ ಇದ್ದಂತಹ ಬೆಳೆ ಸಂಪೂರ್ಣವಾಗಿ ಸರ್ವ ನಾಶವಾಗಿದೆ. ರಸ್ತೆಯಂ ಎರಡೂ ಕಡೆಗಳಲ್ಲಿ ಟೊಮ್ಯಾಟೋ ಆಪ್ಪೊಂದು ಚೆನ್ನಾಗಿತ್ತು. ಇನ್ನು ಕೆಲವು ಕಡೆಗಳಲ್ಲಿ ಕಿತ್ತಂತಹ ಟೊಮ್ಯಾಟೊಗಳನ್ನು ಬುಟ್ಟಿಯಲ್ಲಿ ಹಾಕಿದ್ದು ಪೂರ್ಣವಾಗಿ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ. ರಸ್ತೆಯ ಬಗ್ಗೆ ಹೇಳುವುದಾದರೆ ಆ ಎರಡು ಹೋಬಳಿಗಳಲ್ಲಿರುವಂತಹ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿದ್ದು ಕಾಲು ನಡಿಗೆಯಲ್ಲೂ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹ ಸ್ಥಿತಿಯಲ್ಲಿವೆ. ಇದರಲ್ಲಿ ಆಗಿರುವಂತಹ ಟೊಮ್ಯಾಟೊ, ತರಕಾರಿ ಎಷ್ಟು ನಷ್ಟವಾಗಿದೆ ಎಂಬುದನ್ನು ಅಂದಾಜು ಮಾಡಿ ಎಂಟಾದಾಗಿ ಅಧಿಕಾರಿಗಳಿಗೆ ತಿಳಿಸಿದ್ದರೂ ಕೂಡ ಅವರು ಸರಿಯಾದ ರೀತಿಯಲ್ಲಿ ಅಂದಾಜು ಮಾಡಿಲ್ಲ. ಇದರ ಬಗ್ಗೆ ನಾನೂ ಕೂಡ ಪತ್ರ ಬರೆದಿದ್ದೇನೆ, ಮಾನ್ಯ ಕಂದಾಯ ಮಂತ್ರಿಗಳಿಗೂ ಕೂಡ ಪತ್ರ ಬರೆದಿದ್ದೇನೆ. ಆಗಿರತಕ್ಕ ನಷ್ಟದ ಬಗ್ಗೆ ನಾನು ಮುಖ್ಯಮಂತ್ರಿಗಳಿಗೂ ಪತ್ರವನ್ನು ಬರೆದಿದ್ದೇನೆ. ರಸ್ತೆ ಕೆರೆ ಕಂಟಿಗೆಗಳಲ್ಲಿ ಆಗಿರತಕ್ಕ ನಷ್ಟದ ಬಗ್ಗೆ ಇನ್ನೂ ಅಂದಾಜು ಮಾಡಿಲ್ಲ. ಅಧಿಕಾರಿಗಳ ಮೇಲೆ ಒತ್ತಾಯ ತಂದಮೇಲೆ ಈಗ ಒಂದು ಪರದಿಯನ್ನು ಕಳುಹಿಸಿದ್ದಾರೆ. ಕಾನೂನು ಪ್ರಕಾರ ಫ್ಲಡ್ ಡಾಮೇಜ್ ಆದತಕ್ಷಣ ಟೆಲಿಗ್ರಾಮ್ ಕೊಡಬೇಕು ಎಂದು ನಿಯಮ ಇದೆ. ಆದರೆ ಇಲ್ಲಿ ಎರಡು ಕೆಲಸಕ್ಕೆ ಮಾತ್ರ ಟೆಲಿಗ್ರಾಮ್ ಕೊಟ್ಟಿದ್ದಾರೆ. ಉಳಿದ ಕೆಲಸಗಳ ಬಗ್ಗೆ, ಕೆರೆಗಳ ನಷ್ಟದ ಬಗ್ಗೆ ಟೆಲಿಗ್ರಾಮ್ ಕೊಟ್ಟಿಲ್ಲ. ಅಲ್ಲಿ ಆಗಿರತಕ್ಕ ರಸ್ತೆ, ಕೆರೆ ನಷ್ಟದ ಬಗ್ಗೆ ಅತಿ ಜಾಗ್ರತೆಯಾಗಿ ಜರೂರಾಗಿ ರಿಪೇರಿ ಕೆಲಸ ಆಗಬೇಕಾಗಿದೆ. ಅದಕ್ಕೆ ಕನಿಷ್ಟ ೪೦ ಲಕ್ಷ ರೂಪಾಯಿ ಎಸ್ಟಿಮೇಟ್ ಮಾಡಿದ್ದಾರೆ. ಈ ೪೦ ಲಕ್ಷ ರೂಪಾಯಿ ತಕ್ಷಣ ಬಿಡುಗಡೆ ಆಗಬೇಕಾಗುತ್ತದೆ. ಅಲ್ಲಿ ಎತ್ತಿನಗಾಡಿ, ಸೈಕಲ್ ಕೂಡಾ ಓಡಾಡುವುದಕ್ಕಾಗುವುದಿಲ್ಲ. ಈ ೪೦ ಲಕ್ಷ ರೂಪಾಯಿಗಳನ್ನು ಯಾವ ಆಕ್ಟ್ ಕೆಳಗೆ ಬಿಡುಗಡೆ ಮಾಡುತ್ತೀರೋ ಗೊತ್ತಿಲ್ಲ. ಅಲ್ಲಿರತಕ್ಕ ಜನರಿಗೆ ತೊಂದರೆ ಆಗಿದೆ. ಈ ೪೦ ಲಕ್ಷ ರೂಪಾಯಿಗಳನ್ನು ಜಾಗ್ರತೆಯಾಗಿ ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ಜೊತೆಗೆ ವೆಂಕಟರಾಮಯ್ಯನವರೂ ಈ ಬಗ್ಗೆ ಹೇಳಿದ್ದಾರೆ. ಐಆರ್‌ಡಿಪಿ ನಾರ್ಮ್ಸ್ ಪ್ರಕಾರ ೧೯೦–೧೨೦ ಜನರಿಗೆ ೨ ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಈಗ ಒಬ್ಬೊಬ್ಬರಿಗೆ ೧೦ ಸಾವಿರ, ೨೦ ಸಾವಿರ ರೂ. ನಷ್ಟವಾಗಿದೆ. ಅವರಿಗೆ ಇನ್ನೂ ಏನೂ ಪರಿಹಾರ ಕೊಟ್ಟಿಲ್ಲ. ಮನೆಯಲ್ಲಿರುವ

ಸಾವಾನನ್ನು ಮಾರಿ ಏಷ್ಟೋ ಜನ ಬೆಳೆ ಹಾಕಿದ್ದರು. ಅವರ ಬೆಳೆಗೆ ನಷ್ಟವಾಗಿದೆ. ಈಗ ಮತ್ತೆ ಮುಂಗಾರು ಮಳೆ ಬಿದ್ದಿದ್ದು ಬಾವಿಗಳಲ್ಲಿ ನೀರು ಬಂದಿದೆ. ಮತ್ತೆ ಬೆಳೆ ಬೆಳೆಯುವ ಪರಿಸ್ಥಿತಿಯಲ್ಲಿ ಅವರಿಲ್ಲ. ಕಾರಣ ಇವರಿಗೆ ನಷ್ಟದ ಹಣ ದೊರೆತಿಲ್ಲ. ಆದುದರಿಂದ ಇವರಿಗೂ ಕೂಡಾ ಡಿಸ್ಕ್ರಿಮಿನೇಟ್ ಮಾಡದೇ, ಈ ರೈತ, ಆ ರೈತ ಎಂದು ಲೆಕ್ಕ ಹಾಕದೇ ಎಲ್ಲಾ ರೈತರಿಗೂ ಆಗಿರತಕ್ಕ ನಷ್ಟವನ್ನು ತುಂಬಿಸತಕ್ಕ ವಿಪ್ರಾಡನ್ನು ತಕ್ಷಣ ಮಾಡಬೇಕು. ಒಂದು ದುರಾದೃಷ್ಟ ಸಂಗತಿ ಏನೆಂದರೆ, ಘಟನೆ ನಡೆದು ಒಂದು ತಿಂಗಳಾದರೂ ಕೂಡಾ ಇಲ್ಲಿಯವರಿಗೆ ಸರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ಸಣ್ಣ ರೈತರಿಗೆ ಏಮೋ ೩೦೦ ರೂಪಾಯಿ: ೮೦೦ ರೂಪಾಯಿ ಕೊಟ್ಟಿದ್ದೀರಿ. ಉಳಿದವರಿಗೆ ಯಾವ ರೀತಿಯಂ ಅನುಕೂಲವೂ ಆಗಿಲ್ಲ. ಈ ಬಗ್ಗೆ ತಡ ಮಾಡುವುದು ಬೇಡ. ಹಣ ಇಲ್ಲ, ಪಂತ್ರೊಂದು ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳದೇ ಎಲ್ಲರಿಗೂ ಪರಿಹಾರ ಕೊಡತಕ್ಕ ವಿಪ್ರಾಡನ್ನು ನಾವು ನೋಡುತ್ತಿದ್ದೇವೆ. ಪರಿಶೀಲನೆ ಮಾಡುತ್ತೇವೆಂದು ಹೇಳುವುದು ದಯವಿಟ್ಟು ಬೇಡ. ಇವತ್ತು, ನಾಳೆ ಅಥವಾ ಒಂದು ವಾರದೊಳಗೆ ಎಲ್ಲ ನಷ್ಟಕ್ಕೂ ಪರಿಹಾರ ಕೊಡುವ ವ್ಯವಸ್ಥೆ ಮಾಡಬೇಕು. ಇನ್ನು ೧೫ ದಿವಸ ಅಥವಾ ೧ ತಿಂಗಳ ಒಳಗೆ ರಸ್ತೆ ರಿಪೇರಿ ಕೆಲಸವನ್ನು ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ೪೦ ಲಕ್ಷ ರೂಪಾಯಿ ಏನು ಬೇಕಾಗಿದೆ ಅದಕ್ಕೆ. ತಕ್ಷಣ ಹಣವನ್ನು ಬಿಡುಗಡೆ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಬೇಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಹಾಗೂ ನೀರಾವರಿ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ವ್ಯಕ್ತ ಮಾಡಿದ ಭಾವನೆಗಳನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ನಷ್ಟ ಆಗಿರುವ ಬಗ್ಗೆ ಅಧಿಕಾರಿಗಳ ವರದಿಯಲ್ಲಿ ಇದೆ. ಇದನ್ನು ಮಾನ್ಯ ಸದಸ್ಯರೂ ಗಮನಕ್ಕೆ ತಂದಿದ್ದಾರೆ. ದುರ್ದೈವದಿಂದ, ಇಂತಹ ಒಂದು ನೈಸರ್ಗಿಕ ವಿಕೋಪಕ್ಕೆ ತುತ್ತಾದಾಗ ಅದು ಬೆಂಕಿಯಿಂದ ಇರಬಹುದು, ಪ್ರವಾಹದಿಂದ ಇರಬಹುದು ಅಥವಾ ಅನಾವೃಷ್ಟಿಯಿಂದ ಇರಬಹುದು, ಸಂಪೂರ್ಣ ಪರಿಹಾರವನ್ನು ಕೊಡತಕ್ಕ ವ್ಯವಸ್ಥೆ ಈ ರಾಷ್ಟ್ರದಲ್ಲೇ ಇಲ್ಲ, ಈ ರಾಜ್ಯದಲ್ಲೂ ಇಲ್ಲ. ಸರ್ಕಾರದ ಹಣಕಾಸಿನ ಒಂದು ಮಿತಿಯಲ್ಲಿ ಕೆಲವು ನಿಯಮಗಳನ್ನು ಮಾಡಿದ್ದೇವೆ. ಆ ನಿಯಮಾವಳಿಗಳಿಗೆ ಅನುಗುಣವಾದ ರೂಪದಲ್ಲಿ ಹಣವನ್ನು ಕೊಡಲಾಗಿದೆ ಈ ನಿಯಮಾವಳಿ ಮೀರಿದ ಏನು ಬೇಡಿಕೆ ಇದೆ ಅದರ ಬಗ್ಗೆ ಈಗಾಗಲೇ ಶಿವಮೊಗ್ಗದಲ್ಲಿ ಸಮಿತಿಯವರಂ ಸಭೆ ಮಾಡಿದ್ದಾರೆ. ಕೆಲವು ಸಲಹೆಗಳನ್ನು ಕೂಡಾ ಕೊಟ್ಟಿದ್ದಾರೆ. ಕೆಲವು ನಿರ್ಣಯಗಳನ್ನು ಸಹ ತೆಗೆದುಕೊಂಡಿದ್ದಾರೆ. ಬೆಂಕಿ ಬಿದ್ದು ೪೧ ಕೋಟಿ. ೫೦ ಕೋಟಿ ರೂಪಾಯಿ ನಷ್ಟ ಆದರೂ ಕೂಡಾ ಆ ಬಗ್ಗೆ ಪರಿಹಾರ ಕೊಡುವುದಕ್ಕೆ ಸರ್ಕಾರ ನಿಯಮ ಹಾಕಿಕೊಳ್ಳುತ್ತದೆ. ಇಲ್ಲಿಯ ನಷ್ಟದ ಬಗ್ಗೆ ವಿವರ ಬಂದಿಲ್ಲ. ಸರ್ಕಾರ ನಿಯಮದ ಪ್ರಕಾರ ಏನು ಮಾಡಬೇಕೋ ಅದನ್ನು ಮಾಡಿದೆ. ಇನ್ನೂ ಹೆಚ್ಚಿನ ಪರಿಹಾರವನ್ನು ಕೊಡತಕ್ಕ ಅವಶ್ಯಕತೆಯ ಬಗ್ಗೆ ಒತ್ತಾಯ ಮಾಡಿದ್ದಾರೆ. ಸರ್ಕಾರ ಕೂಡಾ ಈ ಬಗ್ಗೆ ಆಲೋಚನೆ ಮಾಡುತ್ತದೆ, ಸಮಿತಿಯ ಸಲಹೆ ಅಲ್ಲದೇ ರೈತರ ಸಾಲ ಮುಂದೂಡತಕ್ಕದ್ದು ಅಥವಾ ಅದನ್ನು ಕೈ ಬಿಡತಕ್ಕ ವಿಚಾರ ಇರುತ್ತದೆ. ಇದರ ಹೊರತಾಗಿ ಸಾಲ ಕೊಡತಕ್ಕ ವಿಚಾರ, ಬೀಜ ಕೊಡತಕ್ಕ ವಿಚಾರ, ಗೊಬ್ಬರ ಕೊಡತಕ್ಕ ಬಗ್ಗೆ ಸಹ ವಿಚಾರ ಮಾಡುತ್ತಿದ್ದೇವೆ.

ಅಲ್ಲದೆ ಬ್ಯಾಂಕುಗಳ ಮೂಲಕ ಅವರ ಪುನರ್ ವ್ಯವಸ್ಥೆಗೆ ಅನುಕೂಲ ಮಾಡಿಕೊಡುತ್ತೇವೆ. ಈ ಬಗ್ಗೆ ನಾನು ಕೂಡಲೇ ಎರಡು ಜಿಲ್ಲೆಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳ ಸಭೆಯನ್ನು ನಾನು ಕರೆಯುತ್ತಿದ್ದೇನೆ. ೪೦ಲಕ್ಷ ರೂಪಾಯಿ ಲಾಸ್ ಆಗಿದೆ ಯೆಂದು ಹೇಳಿದ್ದಾರೆ. ತೋಟಗಳು ಪೂರ್ಣ ಹಾಳಾಗಿವೆ, ತೆಂಗಿನತೋಟ, ಅಡಿಕೆತೋಟಗಳೂ ಹಾಳಾಗಿವೆ. ಆದ್ದರಿಂದ ಸರ್ಕಾರದಿಂದ ಏನೂ ಪ್ರರಿಹಾರ ಕೊಡಬೇಕೋ ಅದನ್ನು ಕೊಡಲಾಗುತ್ತದೆ. ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಸಹ ಪರಿಹಾರ ಕೊಡಲಾಗಿದೆ. ಬ್ಯಾಂಕುಗಳ ಪಂಚಾಯಿತರ, ಬೇರೆ ಬೇರೆ ಸಂಸ್ಥೆಗಳ ಮುಖಾಂತರ ಏನೇನು ಸಹಾಯ ಮಾಡಬೇಕೋ ಅದನ್ನು ಈ ವಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಸಭೆಯನ್ನು ಕರೆದು ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ನಿಯಮಗಳ ಪ್ರಕಾರ ಮಾಡುತ್ತೇವೆಂದರೆ ರೈತರು ಏನಾಗಬೇಕು?

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಳೆ ಬಿದ್ದಾಗ ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ ಹತ್ತಿರ ಬಿದ್ದ ಹೊಡ್ಡ ಅಲಿಕಲ್ಲು ೧೫ ದಿವಸ ಕರಗದೆ ಇತ್ತು. ಅದನ್ನು ಜನಗಳು ಹೋಗಿ ನೋಡಿಕೊಂಡು ಬಂದಿದ್ದಾರೆ. ಶಿಕಾರಿಪುರ ನಗರದ ಹನುಮಂತಯ್ಯನವರ ಮಗ ಕೂಲಿ ಕೆಲಸ ಮಾಡುತ್ತಿದ್ದ ನವೀನ

ಎಂಬುವನು ಮತ್ತು ಅವನ ಮಗಳು ನಂದಿನ ಸತ್ತರಂ. ಭದ್ರಾವತಿಯಲ್ಲಿ ದುಡಿಯುತಕ್ಕ ರೈತ ಸತ್ತಿದ್ದಾನೆ. ತಮ್ಮ ಲಿಖಿತ ಮೂಲಕ ಉತ್ತರಿಸಿರುವ ಉತ್ತರದಲ್ಲಿ ಇಷ್ಟು ನಷ್ಟವಾಗಿದೆ ಎಂದು ಹೇಳಿದ್ದೀರಿ. ೩೫೦೦ ರೂಪಾಯಿಗಳಿಗಿಂತ ವಾರ್ಷಿಕ ಪರಮಾನ ಕಡಮೆಯಿರುವವರು ೧೦೨೧ ಜನರಿ ಇದ್ದಾರೆ. ಅವರಿಗಾಗಿರುತಕ್ಕ ನಷ್ಟ ೨೬ಲಕ್ಷ ೨೬ಸಾವಿರ ಎಂದು ಹೇಳಿದ್ದೀರಿ. ಇಷ್ಟು ನಷ್ಟವಾಗಿರು ವಾಗ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರವನ್ನು ೪೦ ಸಾವಿರ ರೂಪಾಯಿ ಕೊಟ್ಟಿದ್ದೇ ವೆಂದು ಹೇಳಿದರೆ ಅದು ಏತಕ್ಕೆ ಸಾಲುತ್ತದೆ? ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳೆಲ್ಲ ಪರಿಹಾರ ಕೊಡುವುದಕ್ಕೆ ಅವಕಾಶವಿದೆಯೋ ಇಲ್ಲವೋ ಗೊತ್ತಿಲ್ಲ. ವಿಚಿತ್ರವಾದ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಈಗಾಗಲೇ ಒಂದು ತಿಂಗಳು ಕಳೆದಿದೆ. ಕಂದಾಯ ಸಚಿವರು ಸ್ಥಳಕ್ಕೆ ಭೇಟಿ ನೀಡಿ ಏನೇನು ಪರಿಹಾರ ಕೊಡಬೇಕೋ ಅದನ್ನು ಕೊಡುವ ವ್ಯವಸ್ಥೆ ಮಾಡಬೇಕು. ಈಗಾಗಲೇ ಬಿತ್ತನೆ ಸಮಯ ಬಂದಿದೆ. ಭೂಮಿಯನ್ನು ಹದ ಮಾಡಿಕೊಳ್ಳಬೇಕಾಗಿದೆ. ಸರ್ಕಾರ ಇಂತಹ ಸಮಯದಲ್ಲಿ ೬೦-೮೦೦ ರೂಪಾಯಿ ಪರಿಹಾರವನ್ನು ಕೊಟ್ಟರೆ ನಿಜವಾಗಿಯೂ ಏನೇನು ಸಾಲುವುದಿಲ್ಲ. ರೈತರಿಗೆ ವಿಶೇಷವಾಗಿ ಈವೊಂದು ಸಂದರ್ಭವನ್ನು ಪರಿಗಣನೆಗೆ ತೆಗೆದುಕೊಂಡು ರೈತರು ಯಾರೇ ಇರಲಿ ಅವರ ಸಾಲವನ್ನು ಮನ್ನಾ ಮಾಡಬೇಕು, ಅವರಿಗೆ ಬೇಗ ಪರಿಹಾರವನ್ನು ಕೊಡಬೇಕು. ಈ ಬಗ್ಗೆ ಬೇರೆ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ನೋಡಿ ಸಹಾಯ ಮಾಡಬೇಕು. ಶಿಕಾರಿಪುರ ನಗರದಲ್ಲಿ ಎರಡು ಮಕ್ಕಳು ಸತ್ತಿವೆ, ಭದ್ರಾವತಿಯಲ್ಲಿ ಒಬ್ಬ ರೈತ ಸತ್ತಿದ್ದಾನೆ. ಇವರಿಗೆ ತಲಾ ೧೦ಸಾವಿರ ರೂಪಾಯಿ ಪರಿಹಾರ ಕೊಡುವ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ನಾಮರ್ಸ್ ಅನ್ನು ಇಟ್ಟುಕೊಂಡರೆ ರೈತರಿಗೆ ಅನುಕೂಲ ವಾಗುವುದಿಲ್ಲ ನಿರ್ದಿಷ್ಟವಾದ ನಾಮರ್ಸ್ ಅನ್ನು ಸಡಿಲ ಮಾಡಿ ರೈತರಿಗೆ ಹಣ ಸಿಗುವ ವ್ಯವಸ್ಥೆಯನ್ನು ಮಾಡಬೇಕು. ಈಗಿರುವ ನಾಮರ್ಸ್ ಪ್ರಕಾರ ೬೦೦ ರೂಪಾಯಿ ಸಿಗುತ್ತದೆ ಅದಕ್ಕಿಂಥ ಜಾಸ್ತಿ ಕೊಡು ವುದಕ್ಕೆ ಆಗುವುದಿಲ್ಲ. ನೀವು ಕೊಡುವ ೬೦೦ ರೂಪಾಯಿಗಳಿಂದ ಏನೂ ಆಗುವುದಿಲ್ಲ. ಆದ್ದರಿಂದ ನಾಮರ್ಸ್‌ಗಳನ್ನು ಸಡಿಲಗೊಳಿಸಿ, ಬ್ಯಾಂಕುಗಳಿಂದ ನೆರವು ಕೊಡಿಸುತ್ತೇವೆಂದರೆ ಅದರಿಂದ ರೈತರಿಗೆ ಅನುಕೂಲವಾಗುವುದಿಲ್ಲ. ನಷ್ಟವಾಗಿರುವಂತಹ ರೈತರಿಗೆ ೬೦೦ ರೂಪಾಯಿ ಕೊಟ್ಟರೆ ಏನೂ ಸಾಲುವುದಿಲ್ಲ. ನಾಮರ್ಸ್‌ಗಳನ್ನು ಸಡಿಲಗೊಳಿಸಿ ೫ಸಾವಿರ ರೂಪಾಯಿ ಸಿಗುವಂತೆ ಸರ್ಕಾರ ಒಂದು ಆದೇಶವನ್ನು ಹೊರಡಿಸಬೇಕು. ಅದು ಎಲ್ಲರಿಗೂ ಸಿಗುವಂತೆ ಆಗಬೇಕು. ಮಂತ್ರಿಗಳು ೮ ದಿವಸ ಗಳಲ್ಲಿ ಒಂದು ಸಭೆಯನ್ನು ಕರೆಯುತ್ತೇವೆಂದು ಹೇಳಿದ್ದಾರೆ. ಬ್ಯಾಂಕುಗಳು ಅಥವಾ ಬೇರೆ ಸಂಸ್ಥೆ ಗಳಿಗೆ ಸಹಾಯ ಮಾಡುವ ಕೆಲಸವನ್ನು ವಹಿಸಿದರೆ ಅದು ಸಿಗುವುದು ೨ ವರ್ಷಗಳಾಗುತ್ತವೆ. ಆದರಿಂದ ರೈತರಿಗೆ ಅನುಕೂಲವಾಗುವುದಿಲ್ಲ ತಕ್ಷಣ ೧೫ ದಿವಸಗಳಲ್ಲಿ ಎಲ್ಲಾ ರೈತರಿಗೆ ಏನೇನು ನಷ್ಟವಾಗಿದೆ ಅಂದರೆ ೫೦ಸಾವಿರ ರೂಪಾಯಿ ನಷ್ಟವಾಗಿದ್ದರೆ ೨೫ ಸಾವಿರ ಕೊಡಿ, ಈ ರೀತಿ ಒಂದು ಬೇಸಿಸ್ ಇಟ್ಟು ಕೊಂಡು ಪರಿಹಾರ ಕೊಡುವುದಕ್ಕೆ ದಯವಿಟ್ಟು ಒಪ್ಪಿಕೊಳ್ಳಿ. ಸುಮ್ಮನೆ ನಾವು ನಾಮರ್ಸ್ ಎಂದು ಹೇಳಿದರೆ ರೈತರಿಗೆ ತೊಂದರೆಯಾಗುತ್ತದೆ.

ಶ್ರೀ ಸಿ. ಭೈರೇಗೌಡ.—ಅಧ್ಯಕ್ಷರೇ, ನಾನು ಈಗಾಗಲೇ ತಿಳಿಸಿದ್ದೇನೆ ಏನೆಂದರೆ, ಈ ನಿಷ್ಪ ಮಾಳಿಗಳಿರುವುದು ಜನತೆಗೋಸ್ಕರ. ಜನತೆಗೋಸ್ಕರ ನಿಯಮಾವಳಿಗಳು ಅಲ್ಲ. ಇವತ್ತು ರೈತರು ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿರುವಾಗ ನಿಯಮಾವಳಿಗಳನ್ನು ಪಾಲಿಸಬೇಕು ಎಂದು ಹೇಳಿ ಕುಳಿತರೆ ಹೇಗೆ ? ಈಗ ನಿಯಮ ಬದ್ಧವಾಗಿ ಮಳೆ ಬಂತಾ ? ಅದು ಬಂದಿದ್ದರೆ ನಾನು ಇವರ ನಿಯಮವನ್ನು ಒಪ್ಪು ತ್ತಿದ್ದೆ. ಈಗ ರೈತರು ಅನಾಹುತಕ್ಕೀಡಾಗಿದ್ದಾರೆ. ಇಂತಹ ಸಂದರ್ಭದಲ್ಲಿ ನಿಯಮಗಳು ಎಂದರ ಅವರ ಮೇಲೆ ಹೇರುವುದು ಸರಿಯಲ್ಲ. ಶ್ರೀ ವೆಂಕಟರಾಮಯ್ಯನವರು ಹೇಳಿದ ಹಾಗೆ ಕನಿಷ್ಟ ಆಗಿರ ತಕ್ಕಂಥ ನಷ್ಟದಲ್ಲಿ ಶೇಕಡಾ ೫೦ ರಷ್ಟು ಆದರೂ ಅವರು ಇಪ್ಪರು ಎನ್ನದೆ ಪರಿಹಾರವನ್ನು ಸರ್ಕಾ ಭರಿಸಬೇಕು. ಇದನ್ನು ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ. ಮತ್ತೊಂದು ವಿಷಯವೆಂದರೆ ಅಧಿಕಾರಿಗಳ ಸಭೆ ಕರೆಯುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಅಧಿಕಾರಿಗಳು ಈಗಾಗಲೇ ವರದಿಯನ್ನು ಕಳಿಸಿದ್ದಾರೆ. ಹೀಗಿರುವಾಗ ಪುನಃ ಸಭೆಯನ್ನು ಕರೆಯುವುದರ ಅವಶ್ಯಕತೆ, ಇದರ ಕಾರಣ ನನಗೆ ಅರ್ಥ ವಾಗುತ್ತಿಲ್ಲ. ನಷ್ಟದಲ್ಲಿರುತಕ್ಕಂಥವರಿಗೆ ದಾಮಾಶಾ ಪ್ರಕಾರ ಹಣ ಬಿಡುಗಡೆ ಮಾಡುವುದಕ್ಕೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ, ದಾಮಾಶಾ ಪ್ರಕಾರ ನಷ್ಟಕ್ಕೆ ಒಳಗಾದವರಿಗೆ ಅದನ್ನು ಹಂಚಿ ಎಂದು ಹೇಳಿದರೆ ಆಯಿತು, ಒಂದು ನಿರ್ದಿಷ್ಟ ಅಗತಕ್ಕಂಥ ಕೆಲಸ ಇದು. ಇದಕ್ಕೆ ಅಧಿಕಾರಿಗಳ ಸಭೆ ಕರೆಯುವುದು ಅನಾವಶ್ಯಕ. ಇದಕ್ಕೆ ಸಮಯ

ಆಗುತ್ತದೆ. ಅವರುಗಳು ಇಲ್ಲಿಗೆ ಬರತಕ್ಕಂಥಾದ್ದು ಕೂಡ ಅನಾವಶ್ಯಕ, ಈಗ ವ್ಯವಸಾಯ ಪ್ರಾರಂಭವಾಗಿದೆ, ಬಿತ್ತನೆ ಆಗಬೇಕಾಗಿದೆ. ಅವರುಗಳು ತಮಗೆ ಇರತಕ್ಕಂಥ ಸರ್ವವನ್ನೂ ನಷ್ಟ ಮಾಡಿಕೊಂಡಿದ್ದಾರೆ. ಆದ್ದರಿಂದ ಅಧ್ಯಕ್ಷರೆ, ಇವರು ಹಿಂದು ಮುಂದೂ ನೋಡತಕ್ಕದ್ದು ಸರ್ವಥಾ ಸಾಧುವಾದುದಲ್ಲ ಯಾರಾದರೂ ಸರ್ಕಾರಿ ನೌಕರ ಅಕಸ್ಮಾತ್ತಾಗಿ ತೀರಿ ಹೋದರೆ ಸರ್ಕಾರದ ಖಜಾನೆಯಲ್ಲಿ ಹಣ ಇಲ್ಲದೇ ಇದ್ದರೂ ಕೂಡ, ಖಜಾನೆ ಪಾಪರ್ ಆಗಿದ್ದರೂ ಸಹ ಅವನ ಮನೆಗೆ ಶವಸಂಸ್ಕಾರಕ್ಕೆ ಹಣ ತೆಗೆದುಕೊಂಡು ಹೋಗಿ ಕೊಡಬೇಕು ಎಂದು ಸರ್ಕಾರದ ನಿಯಮಾವಳಿ ಇದೆ. ಇಂಥಾದ್ದರಲ್ಲಿ ರೈತರು ನೂರಾರು, ಸಾವಿರಾರು ಜನರು ನಷ್ಟಕ್ಕೆ ಒಳಗಾಗಿರುವಾಗ ಈ ನಿಯಮಗಳು ಅಡ್ಡ ಬರುತ್ತವೆ ಎಂದು ಹೇಳಿದರೆ ಇದು ನನಗೆ ಅರ್ಥವಾಗುತ್ತಿಲ್ಲ. ರೈತರನ್ನು ಭಿಕ್ಷುಕರು ಎನ್ನುವ ರೀತಿಯಲ್ಲಿ ದಯವಿಟ್ಟು ಭಾವಿಸಬೇಡಿ. ರೈತರು ಇರುವುದರಿಂದಲೇ ಈ ಸಮಾಜ ಇರತಕ್ಕದ್ದು, ಈ ದೇಶ ಇರತಕ್ಕದ್ದು. ಅವರನ್ನು ಕಡೆಗಣ್ಣಿನಿಂದ ನೋಡತಕ್ಕದ್ದು ಸರ್ವಥಾ ಸಾಣಿವಾದುದಲ್ಲ ಇದನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ. ತಕ್ಷಣವೇ ಸರ್ಕಾರದವರು ಖಜಾನೆಯಲ್ಲಿರತಕ್ಕಂಥ ಹಣವನ್ನು ಬಿಡುಗಡೆ ಮಾಡಬೇಕು. ನಾಳೆ ಮಾಡುತ್ತೇವೆ, ಒಂದು ವಾರದಲ್ಲಿ ಮಾಡುತ್ತೇವೆ, ಇನ್ನೊಂದು ದಿವಸ ಮಾಡುತ್ತೇವೆ ಎಂದರೆ ಆಗುವುದಿಲ್ಲ. ಅವರು ಬರದಿಯನ್ನು ಕಳಿಸಿದ್ದಾರೆ. ಅದರ ಪ್ರಕಾರ ಹಣ ಬಿಡುಗಡೆ ಮಾಡಲಿ. ಇದಕ್ಕೆ ಯಾಕೆ ಹಿಂದು ಮುಂದು ನೋಡಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ —ಶ್ರೀ ಬೈರೇಗೌಡರು ರೈತರ ಪರವಾಗಿ ಒತ್ತಾಯ ಮಾಡಿದ್ದಾರೆ, ನಾನು ಒಪ್ಪುತ್ತೇನೆ. ನಿಯಮಾವಳಿಗಳು ಜನರ ಸಲುವಾಗಿಯೇ ಇವೆ. ನಿಯಮಾವಳಿಗಳನ್ನು ಬದಲಾವಣೆ ಮಾಡಬೇಕಾಗಿದ್ದರೆ ಮಾಡೋಣ. ಶ್ರೀ ಬೈರೇಗೌಡರು ಹಿಂದೆ ಮಂತ್ರಿಯಾಗಿದ್ದವರು. ನೈಸರ್ಗಿಕ ವಿಕೋಪ ಸಂಭವಿಸಿದಾಗ-ಬೆಂಕಿ, ಪ್ರವಾಹ ಅತಿವೃಷ್ಟಿ ಆದಾಗ ಸಂಪೂರ್ಣವಾಗಿ ನಷ್ಟ ತುಂಬಿಕೊಡಲಿಕ್ಕೆ ಆಗುವುದಿಲ್ಲ. ಇಂತಹ ವ್ಯವಸ್ಥೆ ಇಲ್ಲ. ಇದು ಯಾವ ರಾಜ್ಯದಲ್ಲೂ ಇಲ್ಲ, ರಾಷ್ಟ್ರದಲ್ಲೂ ಇಲ್ಲ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. ನಮಗೂ ಮನಸ್ಸು ಇದೆ, ಅವರ ಬಗ್ಗೆ ಅನುಕಂಪ ಇದೆ. ಕೊಡತಕ್ಕಂಥ ಮನಸ್ಸು ಇದೆ, ಆದರೆ ಹಣ ಬೇಕಲ್ಲ ?

ಶ್ರೀ ಬಿ, ಎಸ್, ಯಡಿಯೂರಪ್ಪ.—ಮನಸ್ಸು ಇದ್ದರೆ ಆಯಿತೇನು ? ಹಣ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಲ್ಪ ಕೇಳಿ. ತಾವು ಹೇಳಿದಂತೆ ಕೊಡಲಿಕ್ಕೆ ಆಗುವುದಿಲ್ಲ. ಮನಸ್ಸು ಇದ್ದರೆ ದುಡ್ಡು ಇಲ್ಲ ಇದೇನೂ ಮೊದಲನೇ ಸಲ ಅಲ್ಲ. ಹಿಂದೆ ನೈಸರ್ಗಿಕ ವಿಕೋಪಗಳು ಸಂಭವಿಸಿವೆ. ಹಿಂದೆ ಇಂಥಾದ್ದು ಆದಾಗ ಏನು ನಿಯಮಾವಳಿಗಳ ಪ್ರಕಾರ ಪರಿಹಾರ ಕೊಟ್ಟಿದ್ದೆವೋ, ಅದೇ ಪ್ರಕಾರ ಕೊಡುತ್ತಿದ್ದೇವೆ. ರೈತರಿಗೆ ಸಹಾಯ ಮಾಡಬೇಕು ನಿಜ. ಅದಕ್ಕಾಗಿ ಅಧಿಕಾರಿಗಳ ಸಭೆಯನ್ನು ಕರೆದಿದ್ದೇವೆ. ಏಕೆಂದರೆ ಇಲ್ಲಿ ಕೃಷಿ ಇಲಾಖೆ, ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ, ಮತ್ತು ಲೋಕೋಪಯೋಗಿ ಇಲಾಖೆ ಇದೆ. ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯಿಂದ ಮಾಡಬೇಕಾಗುತ್ತದೆ. ಈ ಬೇರೆಬೇರೆ ಇಲಾಖೆಗಳಿಂದ ಬಜೆಟ್‌ನಲ್ಲಿ ಇರತಕ್ಕಂಥ ಹಣದಿಂದ ಜೊತೆಗೆ ಬ್ಯಾಂಕುಗಳ ಮುಖಾಂತರ, ಬೇರೆಬೇರೆ ಸಂಘಸಂಸ್ಥೆಗಳ ಮುಖಾಂತರ ಅವರಿಗೆ ಸಹಾಯ ಮಾಡತಕ್ಕ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ. —ಸಾಲವನ್ನಾದರೂ ಮನ್ನಾ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಾಲ ಮನ್ನಾ ಮಾಡಬೇಕಾದರೆ ನಬಾರ್ಡ್‌ನವರ ನಿಯಮಗಳಿವೆ. ದಯವಿಟ್ಟು ತಾವು ಅರ್ಥಮಾಡಿಕೊಳ್ಳಬೇಕು. ರಾಜ್ಯಸರ್ಕಾರವೊಂದೇ ನಿರ್ಣಯ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ಕೇಂದ್ರದ ಕೆಲವು ನೀತಿ ನಿಯಮಗಳಿವೆ, ನಬಾರ್ಡ್‌ನವರ ನಿಯಮಾವಳಿಗಳಿವೆ. ಅದಕ್ಕಾಗಿ ಸಮಗ್ರವಾಗಿ ಆಲೋಚನೆ ಮಾಡಲಿಕ್ಕೆ ಸಭೆ ಕರೆಯುತ್ತಿದ್ದೇವೆ. ಸಾಲ ಸೂಟಿ ಬಿಡತಕ್ಕದ್ದು, ಬೀಜ ಕೊಡಲಿಕ್ಕೆ, ಗೊಬ್ಬರ ಕೊಡತಕ್ಕಂಥ ಎಲ್ಲದರ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ಆದಷ್ಟು ಬೇಗ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ನೀವು ಚೆನ್ನಾಗಿ ಕೋಆರ್ಡಿನೇಟ್ ಮಾಡಬಹುದು. ಇದನ್ನು ಮಾಡಿ ಬೇಗ ಒಂದು ತೀರ್ಮಾನಕ್ಕೆ ಬನ್ನಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವಷ್ಟು ಬೇಗ ಮಾಡೋಣ. ತಾವು ಹಿಂದೆ ಕಂದಾಯ ಇಲಾಖೆಯ ಮಂತ್ರಿಯಾಗಿದ್ದಿರಿ. ಆಗ ಏನು ಆಗುತ್ತಿತ್ತೊ, ಅದೇ ತರಹ ಈಗಲೂ ಮಾಡೋಣ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನಿರ್ದಿಷ್ಟವಾಗಿ ಅವರು ಏನು ಹೇಳಿದರು.

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ, ನಿಮ್ಮ ಗಮನ ಸೆಳೆಯುವ ಸೂಚನೆ ಕೇಳಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದರ ಬಗ್ಗೆ ಮಾನ್ಯ ಮಂತ್ರಿಗಳು ನಿರ್ದಿಷ್ಟವಾಗಿ ಹೇಳಬೇಕಾಗುತ್ತದೆ, ಇಲ್ಲದೇ ಹೋದರೆ ಈ ನೀತಿಯನ್ನು ಪ್ರತಿಭಟನೆ ಮಾಡಬೇಕಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ನಾರಮ್ಸ್ ೫೦ ವರ್ಷದ ಹಿಂದೆ ಮಾಡಿದ್ದು.

ಅಧ್ಯಕ್ಷರು.—ಆಗುವುದಿಲ್ಲ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ರೈತರ ಬಗ್ಗೆ ಸರ್ಕಾರಕ್ಕೆ ಕಳಕಳಿ ಇಲ್ಲವೆಂದು ಹೇಳಿ ವಾಕೌಟ್ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಆಗುವುದಿಲ್ಲ, ನಿಮ್ಮದು ಅವಕಾಶ ಮುಗಿದಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಒಂದು ಸಂಸಾರಕ್ಕೆ ೫ ಸಾವಿರ ರೂಪಾಯಿಗಳ ಪರಿಹಾರ ಕೊಡುತ್ತೀರಾ, ಏನು ಎಂಬುದನ್ನು ನಿರ್ದಿಷ್ಟವಾಗಿ ಹೇಳಿ. ನಾವು ಈ ವಿಚಾರದಲ್ಲಿ ಪ್ರತಿಭಟನೆ ಮಾಡಬೇಕಾಗುತ್ತದೆ. ಇದು ರೈತರ ವಿರೋಧಿ ಸರ್ಕಾರ ಇದೆ, ರೈತರ ಬಗ್ಗೆ ಏನೂ ಕಳಕಳಿ ಇಲ್ಲವೆಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಈಗ ನೀವು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದು ರೈತ ವಿರೋಧಿ ಸರ್ಕಾರ ಇದೆ. ರೈತರ ಬಗ್ಗೆ ಕಳಕಳಿ ಇಲ್ಲ. ಇವತ್ತು ೫-೬ ಸಾವಿರ ಕುಟುಂಬಗಳ ಜನರು ಬೀದಿಪಾಲು ಆಗಿದ್ದಾರೆ. ಇಂತಹ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಸ್ಥಳಪರೀಕ್ಷೆ ಮಾಡಿಲ್ಲ, ಸ್ಥಳಪರೀಕ್ಷೆ ಮಾಡದಿರುವಂಥ ದೊಡ್ಡ ಜವಾಬ್ದಾರಿ ಇವರಿಗೆ ಇನ್ನೇನಿದೆ.

ಅಧ್ಯಕ್ಷರು.—ದಯವಮಾಡಿ ಕುಳಿತುಕೊಳ್ಳಿ. ಎರಡು ಸಲ ಅವಕಾಶ ಕೊಟ್ಟಿದ್ದೇನೆ. ಸಮರ್ಪಕವಾದ ಉತ್ತರ ಹೇಳಿದ್ದಾರೆ, ಮುಂದಿನ ಗಮನ ಸೆಳೆಯುವ ಸೂಚನೆ ಕರೆದಿದ್ದೇನೆ. ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ. ನೀವು ಮತ್ತೆ ಗಲಾಟೆ ಮಾಡುತ್ತಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇವತ್ತು ಅಲ್ಲಿ ಜನರು ಬೀದಿಪಾಲು ಆಗಿರುವಂಥ ಸನ್ನಿವೇಶ ಉಂಟಾಗಿದೆ. ಇಷ್ಟಾದರೂ ಮಾನ್ಯ ಮಂತ್ರಿಗಳು ಸ್ಥಳ ಪರೀಕ್ಷೆ ಮಾಡುವುದಕ್ಕೆ ಹೋಗಿಲ್ಲ, ನಾವು ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಬೇಕಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—೫೦ ವರ್ಷದ ಹಿಂದೆ ಈ ನಾರಮ್ಸ್ ಮಾಡಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳಿಗೆ ನೆನಪಿರಬಹುದು. ಪ್ರಕೃತಿ ವಿಕೋಪಕ್ಕೆ ತುತ್ತಾದ ಸಂದರ್ಭದಲ್ಲಿ ಯಾವರೀತಿ ಪರಿಹಾರ ಕೊಡಬೇಕು, ಯಾವರೀತಿ ಸಹಾಯ ಮಾಡಬೇಕು ಎಂಬ ಬಗ್ಗೆ ಒಂದು ಬಿಲ್ ತರಬೇಕೆಂದು, ಹಿಂದೆ ಡ್ರಾಫ್ಟ್ ಬಿಲ್ ರೆಡಿಯಾಗಿತ್ತು. ಅದು ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಇರಬಹುದು, ತಾವು ವೆರಿಫೈ ಮಾಡಿ. ಅದರಲ್ಲಿ ಪಂಚಿಗಳು ಸುಟ್ಟುಹೋದ ಬಗ್ಗೆ, ಪ್ರವಾಹದಲ್ಲಿ ಸೊಂದವರಿಗೆ ಯಾವರೀತಿ ಸಹಾಯ ಮಾಡಬೇಕೆಂದು ಇದೆ. ಅದು ಲಾ ಡಿಪಾರ್ಟ್‌ಮೆಂಟ್ ಪರಿಶೀಲನೆಯಲ್ಲಿದೆ. ದಯವಿಟ್ಟು ಆ ಬಿಲ್ಲನ್ನು ಈ ಸಭೆ ಮುಂದೆ ತಂದರೆ, ಅನೇಕ ರೀತಿಯಿಂದ ಸಹಾಯ ಮಾಡಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಬಗ್ಗೆ ಎನ್.ಡಿ.ಸಿ. ಸಭೆಯಲ್ಲಿ ಚರ್ಚೆಯಾಗಿದೆ. ಈ ವಿಚಾರದಲ್ಲಿ ರಾಷ್ಟ್ರನೀತಿಯನ್ನು ರೂಪಿಸಂತ್ತಿದ್ದಾರೆ. ರಾಷ್ಟ್ರಮಟ್ಟದಲ್ಲಿ ಈ ಬಗ್ಗೆ ನಿರ್ಣಯ ಆಗಬೇಕು,

ರಾಜ್ಯಮಟ್ಟದಲ್ಲಿ ಅಲ್ಲ ಇದಕ್ಕೆ ನಮ್ಮ ಸರ್ಕಾರವೂ ಪ್ರಯತ್ನ ಮಾಡುತ್ತಿದೆ. ಜೊತೆಗೆ ಇದರ ಬಗ್ಗೆ ಫ್ಯಾಮಿನ್ ಕೋಡ್ ಮಾಡಿದ್ದೂ ಉಂಟು. ಒಟ್ಟಿನಲ್ಲಿ ಆಲ್ ಇಂಡಿಯಾ ಮಟ್ಟದಲ್ಲಿ ಹೊಸ ಪಾಲಿಸಿ ಮಾಡುತ್ತಿದ್ದಾರೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಂಧ್ರ ಪ್ರದೇಶದಲ್ಲಿ, ತಮಿಳುನಾಡಿನಲ್ಲಿ, ಕೆಲವು ಪರಿಹಾರ ಕೊಡುವ ಸಲುವಾಗಿ, ಕೆಲವೊಂದು ಕೋಡನ್ನು ತಯಾರು ಮಾಡಿದ್ದಾರೆ. ನೀವೂ ಕೂಡ ಲಾ ಡಿಪಾರ್ಟ್‌ಮೆಂಟ್‌ನವರನ್ನು ಕರೆಸಿ, ಹಿಂದೆ ತಯಾರು ಮಾಡಿರುವ ಬಿಲ್ಲನ್ನು ಪೆರಿಫೈ ಮಾಡಿ. ಸಾಮಾನ್ಯವಾಗಿ ಅದು ಟೈಪ್ಡ್ ಕಾಪಿ ಇರಬಹುದು. ಅದರಲ್ಲಿ ಯಾವರೀತಿ ಸಹಾಯ ಮಾಡಬೇಕು, ಯಾವರೀತಿ ಪರಿಹಾರ ಕೊಡಬೇಕು ಎಂದು ಇದೆ. ತಹಶೀಲ್ದಾರ್ ಅವರು ಎಷ್ಟು ಕೊಡಬೇಕು, ಅಸಿಸ್ಟೆಂಟ್ ಕಮೀಷನರ್ ಎಷ್ಟು ಕೊಡಬೇಕು, ಜಿಲ್ಲಾಧಿಕಾರಿಗಳು ಎಷ್ಟು ಕೊಡಬೇಕು ಎಂದು ಇದೆ. ಹಿಂದೆ, ಇದನ್ನು ಕಾನೂನು ರೂಪದಲ್ಲಿ ತರಬೇಕೆಂಬ ದೃಷ್ಟಿಯಿಂದ ಡ್ರಾಫ್ಟ್ ಮಾಡಿದ್ದೇವೆ. ದಯವಾಡಿ, ಅದನ್ನು ನೋಡಿ ಪರಿಶೀಲಿಸಿ ತರತಕ್ಕಂಥ ಪ್ರಯತ್ನ ಮಾಡಿ,

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಹೇಳತಕ್ಕಂತಾದ್ದು ಬಹಳ ಹಿಂದಿನ ಮಾತು. ಈಗ ಅದು ಸಮಗ್ರವಾಗಿ ಬದಲಾವಣೆಯಾಗಿದೆ. ಫೈನಾನ್ಸ್ ಕಮೀಷನರ್, ಪ್ಲಾನಿಂಗ್ ಕಮೀಷನರ್ ಅವರುಗಳು ನಿರ್ದಿಷ್ಟವಾದ ಸೂಚನೆಗಳನ್ನು, ನಿರ್ಗಮನದಲ್ಲಿಯೇ ಕೊಟ್ಟಿದ್ದಾರೆ. ಬೆಂಕಿ ಬಿದ್ದುದಕ್ಕೆ, ಪ್ರವಾಹದ ಅನಾಹುತಗಳಿಗೆ, ರಾಜ್ಯ ಸರ್ಕಾರ ಎಷ್ಟು ಕೊಡಬೇಕು, ಕೇಂದ್ರ ಸರ್ಕಾರ ಎಷ್ಟು ಕೊಡಬೇಕು ಎಂಬ ನಿಯಮ ಆಗಿದೆ. ಆದರೆ ಇದು ಸಮಾಧಾನಕರವಾಗಿಲ್ಲ, ಇದನ್ನು ಬದಲಾವಣೆ ಮಾಡಬೇಕೆಂದು ರೆವಿನ್ಯೂ ಮಿನಿಸ್ಟರ್‌ರವರ ಕಾನ್ಫರೆನ್ಸ್‌ನಲ್ಲಿ ಎಲ್ಲಾ ರಾಜ್ಯದ ರೆವಿನ್ಯೂ ಮಿನಿಸ್ಟರ್‌ಗಳೂ ಕೂಡಿ ಸೂಚನೆ ಮಾಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗ ಐದು ಸಾವಿರ ಕುಟುಂಬಗಳು ಬೀದಿಪಾಲಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಬೇಳೆ ಮುಂಗಿಸಿಬಿಡುತ್ತೇನೆ.

ಶ್ರೀ ಆರ್. ವೆಂಕಟರಾವಪ್ಪ.—ಈ ಕೋಡ್ ಮಾಡಿರುವುದು ಇರಲಿಲ್ಲಿಂದೇ ಇಸವಿಯಲ್ಲಿ. ಈಗ ರೂಪಾಯಿ ಬೆಲೆ ಏನಾಗಿದೆ ಸ್ವಾಮಿ ?

ಅಧ್ಯಕ್ಷರು.—ವೆಂಕಟರಾಮಯ್ಯನವರೇ, ಅವರು ಹೇಳಿಮುಗಿಸಲಿ ತಡೆಯಿರಿ ಅವರು ಹೇಳುವುದನ್ನು ಕೇಳಿರಿ

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಎಲ್ಲಾ ರಾಜ್ಯದ ಕಂದಾಯ ಮಂತ್ರಿಗಳೂ ಚರ್ಚೆ ಮಾಡಿ ಒಂದು ನೀತಿಯನ್ನು ರೂಪಿಸಬೇಕೆಂದು ಕೇಂದ್ರ ಸರಕಾರವನ್ನು ಕೇಳಿಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ ಬೇರೆ ಬೇರೆ ಭಾಗದಲ್ಲಿ ಬೇರೆ ಬೇರೆ ರೀತಿಯ ಫ್ಯಾಮಿನ್ ಕೋಡ್ ಇದ್ದು ದರಿಂದ ಅದನ್ನು ಕ್ರೋಢೀಕರಣ ಮಾಡುವುದಕ್ಕೆ ಸಮಿತಿಯನ್ನು ನೇಮಿಸಿದ್ದೇವೆ, ಅಧಿಕಾರಿಗಳನ್ನು ನೇಮಿಸಿದ್ದೇವೆ. ಅವರು ಅದನ್ನು ನೋಡುತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನದೇನು ಸಲಹೆ ಎಂದರೆ, ಅಲ್ಲಿ ಏಳೆಂಟು ಸಾವಿರ ಜನ ಬೀದಿ ಪಾಲಾಗಿದ್ದಾರೆ. ಇದು ಗೊತ್ತಿದ್ದೂ ಸಹ ಮಾನ್ಯ ಕಂದಾಯ ಸಚಿವರಾದ ನೀವು, ನಾವು ಹೇಳುವುದಕ್ಕೆ ಮುಂಚೆಯೇ, ಅಲ್ಲಿಗೆ ಹೋಗಿ, ಸ್ಥಳ ತನಿಖೆ ಮಾಡಿ ಪರಿಸ್ಥಿತಿ ಏನಿದೆ ಎಂಬುದನ್ನು ನೋಡುವುದಕ್ಕೆ ಪ್ರಯತ್ನ ಮಾಡಬೇಕಾಗಿತ್ತು. ಇದನ್ನು ತಾವು ಮಾಡಬೇಕೋ, ಬೇಡವೋ ? ಮಾನ್ಯ ಮಂಜಪ್ಪ ಮಂತ್ರಿಗಳು ಭದ್ರಾವತಿಗೆ ಹೋಗಿದ್ದರು, ತಮ್ಮ ಕಾರ್ಖಿಗೆ ಧಕ್ಕೆ ಬಂದಾಗ ಮಾತ್ರ ಜನಗಳ ಬಳಿಗೆ ಹೋಗುವ ನೀವು, ಅದೇ ಆರೇಳು ಸಾವಿರ ಜನ ಬೀದಿ ಪಾಲಾಗಿದ್ದಾಗ ಏತಕ್ಕೆ ಜನಗಳ ಬಳಿಗೆ ಹೋಗಲಿಲ್ಲ ರೈತ ಬೀದಿಪಾಲಾದ ಸಮಯದಲ್ಲಿ ಏತಕ್ಕೆ ಹೋಗಲಿಲ್ಲ, ಇದಕ್ಕಿಂತ ಮಹತ್ವವಾದ ಕೆಲಸ ಏನಿದೆ ?

(ಗೊಂದಲ)

ಅಧ್ಯಕ್ಷರು.—ನೀವು ಬಿ.ಜೆ.ಪಿ. ಅಧ್ಯಕ್ಷರಾಗಿದ್ದೀರಿ, ಹೀಗೆ ಮಾಡಿದರೆ ಹೇಗೆ ? ಸಮಾಧಾನದಿಂದ ಶಿಸ್ತಿನಿಂದ ಮಾತನಾಡುವುದನ್ನು ಕಲಿಯಿರಿ. ನಿಮಗೆ ಪ್ರತಿದಿವಸ ಸಾನು ಶಿಸ್ತನ್ನು ಕಲಿಸಬೇಕೇ ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ..—ನಾನು ಬಿ.ಜೆ.ಪಿ. ಅಧ್ಯಕ್ಷನಾದ ಮಾತ್ರಕ್ಕೆ ರಾಜ್ಯದ ರೈತರ ಸಮಸ್ಯೆಯ ಬಗ್ಗೆ ಮಾತನಾಡುವುದು ಬೇಡವೇ ? ರೈತರ ಪರವಾಗಿ ಮಾತನಾಡುವುದು ಬೇಡವೇ ? ಸಾವಿರಾರು ಜನ ರೈತರು ಬೀದಿ ಪಾಲಾದ ಸಂದರ್ಭದಲ್ಲಿ ಕಂದಾಯ ಸಚಿವರಾದ ತಾವು ಸ್ಥಳಕ್ಕೆ ಭೇಟಿ ನೀಡಲಿಲ್ಲ, ಇದು ಸರಿಯೇ ?

ಅಧ್ಯಕ್ಷರು,—ವಿರೋಧಿಯವರು ಏನೋ ಸಲಹೆ ಕೊಡುತ್ತಾರೆ.

ಶ್ರೀ ಸಿ. ಬೈರೇಗೌಡ (ವೇಮಗಲ್) —ಅಧ್ಯಕ್ಷರೇ, ರೈತರಿಗೆ ನಷ್ಟವಾಗಿರತಕ್ಕಂಥ ಸಂದರ್ಭದಲ್ಲಿ ರೈತರಿಗೆ ಹಣ ಕೊಡಬಾರದು, ಸಹಾಯ ಮಾಡಬಾರದು ಎಂದು ಯಾವ ಕಾನೂನಿನಲ್ಲಿದೆ. ಹಾಗಿದ್ದರೆ ಅದು ಬದಲಾವಣೆ ಆಗುವವರೆಗೆ ಏನೂ ಕೊಡುವುದು ಬೇಡ. ಹಾಗೇನೂ ಕಾನೂನು ಇಲ್ಲ, ಸರಕಾರ ಇಷ್ಟಪಟ್ಟರೆ, ಮನಸ್ಸು ಮಾಡಿದರೆ ಒಂದು ಕ್ಷಣದಲ್ಲಿ ಕೊಡುವುದಕ್ಕೆ ಅವಕಾಶ ಇದೆ. ಯಾವ ಕಾನೂನಿನಲ್ಲಿ ರೈತರಿಗೆ ಸಹಾಯ ಮಾಡಬಾರದು ಎಂದು ಇಲ್ಲವಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ನಾನು ಏಕೆ ಎದ್ದೆ ಎಂದರೆ, ಈ ನ್ಯಾಚುರಲ್ ಕೆಲಾಮಿಟೀಸ್ ಬಗ್ಗೆ ಯಾವರೀತಿ ಸಹಾಯ ಮಾಡಬೇಕು, ಇವರಲ್ಲಿ ಏನೇನು ಲೋಪ ದೋಷಗಳು ಇವೆ, ಈ ನಿಯಮಗಳನ್ನು ಯಾವರೀತಿ ಬದಲಾವಣೆ ಮಾಡಬೇಕೆಂದು ಹೇಳಿ, ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲೂ ಕೂಡಾ ಪ್ರಸ್ತಾಪ ಬಂದಿತ್ತು. ಆಗ ನಾನು ಅಧ್ಯಕ್ಷನಾಗಿದ್ದೆ. ಈ ಕಾನೂನುಗಳು ಬಹಳ ಔಟ್ ಡೇಟೆಡ್ ಆಗಿವೆ, ಇದನ್ನು ಬದಲಾವಣೆ ಮಾಡಬೇಕೆಂದು ಕೆಲವು ಸಲಹೆಗಳನ್ನು ನಾವು ಪಿ.ಎ ಸಿ. ವರದಿಯಲ್ಲಿ ಕೊಟ್ಟಿದ್ದೇವೆ. ತಮಗೆ ಇದನ್ನು ನೋಳಬೇಕೆಂದು ನಿದ್ದೆ. ತಾವು ಏನು ಹೇಳಿದ್ದೀರಿ ಅದರಲ್ಲಿ ಎರಡು ವಾದ ಇವೆ ಒಂದು ರಾಜ್ಯಕ್ಕೆ ಸಂಬಂಧಪಟ್ಟದ್ದು. ಬರಡನೆಯದು ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟದ್ದು ಬರಗಾಲ ಹಾಗೂ ಪ್ರವಾಹದ ಪ್ರಶ್ನೆ ಬಂದಾಗ ಇದು ಕೇಂದ್ರಕ್ಕೆ ಬರುತ್ತದೆ, ಇತರ ಪ್ರಕೃತಿ ಪ್ರಕೋಪಕ್ಕೆ ಜನ ಈಡಾದಾಗ, ಬೆಂಕಿ ಆಕಸ್ಮಿಕ ಉಂಟಾದಾಗ ಅಥವಾ ಮತ್ತೊಂದು ರೀತಿಯ ಆಕಸ್ಮಿಕವಾದಾಗ ಅದು ಪೂರ್ತಿ ರಾಜ್ಯ ಸರಕಾರಕ್ಕೆ ಸಂಬಂಧಪಟ್ಟಿರುತ್ತದೆ. ಅನೇಕ ಕಡೆಗಳಲ್ಲಿ ಇನ್‌ಕಮ್ ಲಿಮಿಟ್ ಕೂಡಾ ಬರುತ್ತದೆ ಈ ಇನ್‌ಕಮ್‌ಲಿಮಿಟ್‌ನ್ನು ಲಾಂಗ್ ಬ್ಯಾಕ್ ಫಿಕ್ಸ್ ಮಾಡಿದ್ದು ಅನೇಕ ಜನರಿಗೆ ಇದರಿಂದ ಪರಿಹಾರವೇ ಸಿಗುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಕೊಡುತ್ತೇವೆಂದು ಅನೇಕ ಬಾರಿ ಹೇಳುತ್ತೀರಿ. ಇದೇ ರೀತಿ ಇದ್ದರೆ ಎಲ್ಲರೂ ಸಹ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಕೇಳುವ ಪರಿಸ್ಥಿತಿ ಬರುತ್ತದೆ. ಆ ಪರಿಸ್ಥಿತಿ ಬರುತ್ತದೆ. ಈಗ ಬಹಳ ಆರ್ಜೆನ್ಸಿ ಇದೆ. ಇದನ್ನು ಬದಲಾವಣೆ ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. ತಾವು ರೆಕಮೆಂಡ್ ಮಾಡಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಕೊಡಿಸಬಹುದು. ಆದರೆ ಇದರಿಂದ ಪ್ರಾಬ್ಲಮ್ ಸಾಲ್ವ್ ಆಗುವುದಿಲ್ಲ. ಈ ಪ್ರಾಬ್ಲಂ ಸಾಲ್ವ್ ಮಾಡುವುದಕ್ಕೆ ಬೇರೆ ರೀತಿ ಪ್ರಯತ್ನ ಮಾಡಿ. ರಾಷ್ಟ್ರ ಮಟ್ಟದ ನೀತಿ ಏನಿದೆ ಅದನ್ನು ಮಾಡಿ. ಆದರೆ ರಾಜ್ಯ ಮಟ್ಟದಲ್ಲಿ ಇದನ್ನು ಸಾಲ್ವ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಈ ಸಮಸ್ಯೆಯನ್ನು ಪರಿಹಾರ ಮಾಡಬೇಕು. ಇದಕ್ಕೆ ಸಂಬಂಧಪಟ್ಟ ಅನೇಕ ಸಮಸ್ಯೆಗಳ ಬಗ್ಗೆ ಬೇರೆ ಬೇರೆ ಕಮಿಟಿಯವರು ಒತ್ತಾಯ ಮಾಡುತ್ತಿದ್ದಾರೆ. ಪಿ.ಎ.ಸಿ.ಯವರು ಇದರ ಬಗ್ಗೆ ವರದಿ ಕೊಟ್ಟಿದ್ದಾರೆ. ಅದು ತಮ್ಮ ಗಮನಕ್ಕೆ ಬಂದಿರಬಹುದು. ಅದರ ಬಗ್ಗೆ ತಾವು ಏನೂ ಕಾರ್ಯಾಚರಣೆ ಮಾಡಲಿಲ್ಲ, ಕೇಂದ್ರದ ನೀತಿ ರೂಪಿಸುವ ತನಕ ಇದನ್ನು ಕಾಯುವುದು ಬೇಡ. ಕೇಂದ್ರದ ನೀತಿ ಸ್ಥಳೀಯ ಸಮಸ್ಯೆಗಳಿಗೆ, ರಾಜ್ಯಮಟ್ಟದಲ್ಲಿರತಕ್ಕಂಥ ರಾಜ್ಯದ ವ್ಯಾಪ್ತಿಯಲ್ಲಿರತಕ್ಕಂಥ ಸಮಸ್ಯೆಗಳಿಗೆ ಪರಿಹಾರ ರೂಪಿಸುವುದಿಲ್ಲ, ರೂಪಿಸುವುದಕ್ಕೆ ಸಾಧ್ಯವೂ ಇಲ್ಲ. ಇದನ್ನು ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಫ್ಲಡ್‌ನಲ್ಲಿ ಬರುತ್ತದೆ. ಆಲಿಕಲ್ಲು ಮಳೆ ಆಗಿದೆ. ಅದನ್ನು ನಾವು ಕೇಂದ್ರಕ್ಕೆ ಬರಯುತ್ತಿದ್ದೇವೆ. ೧೦ ಕೋಟಿ ರೂಪಾಯಿಗಳ ನಷ್ಟವಾಗಿದ್ದರೆ, ರಾಜ್ಯ ಸರಕಾರವೇ ಪರಿಹಾರ ಕೊಡುವುದಕ್ಕೆ ಆಗುವುದಿಲ್ಲ. ಸಧ್ಯಕ್ಕೆ ನಾವು ಕಂಪೆನ್ಸೇಷನ್ ಕೊಟ್ಟಿದ್ದೇವೆ. ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದಲೂ ಕೊಡುತ್ತಿದ್ದೇವೆ. ಒಂದು ವಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಸಭೆಯನ್ನು ಕರೆದು ಅವರಿಗೆ ತುರ್ತಾಗಿ ಬೀಜ ಗೊಬ್ಬರಸಾಲ ಹೀಗೆ ಏನೇನಂ ಸಹಾಯಬೇಕು ಅದನ್ನು ನೀಡಲಂ ಪ್ರಯತ್ನಿಸುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾವು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಮುಂಚೆ ಸಭೆ ಕರೆಯಬಹುದಾಗಿತ್ತಲ್ಲ.

(ಗೊಂದಲ)

ಶ್ರೀ ಎಸ್ ಆರ್. ಬೊಮ್ಮಾಯಿ.—ಈ ವಿಷಯದಲ್ಲಿ ಕೂಗಾಡಿದರೆ ತಾವು ರೈತರ ಪರ ಎಂದು ಆಗುವುದಿಲ್ಲ. ಅದು ನಮಗೆ ಗೊತ್ತಿದೆ. ಬೇಕಾದರೆ ತಾವು ಪ್ರತಿಭಟನೆ ಮಾಡಿ ಆದರೆ ಈ ರೀತಿ ಮಾಡುವುದು ಸರಿಯಲ್ಲ, ನೀವು ಹೇಳುವುದನ್ನು ನಾನು ಕೇಳಬೇಕು, ನಾವು ಹೇಳುವುದನ್ನೂ ಸಹ ನೀವು ಕೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನೀವು ಮುಂಚೆಯೇ ಸಭೆ ಕರೆಯಬಹುದಾಗಿತ್ತು.

(ಗೊಂದಲ)

ಅಧ್ಯಕ್ಷರು.—ನಿಮ್ಮ ವಿಚಾರ ಮುಗಿದಿದೆ. ನೀವು ಕೂಡಿರಿ.

೧೨–೫೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ...

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ ಅಲ್ಲಿ ರೈತರಸಮಸ್ಯೆ ಇದೆ...

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಸಭೆ...

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ,—ಬಿ.ಜೆ.ಪಿ.ಯವರ ನೀತಿ ಏನು ಎನ್ನುವುದು ನನಗೆ ಗೊತ್ತಿದೆ ಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಏನು ಗೊತ್ತಿದೆ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿ ರೈತರ ಪರವಾಗಿ ತಾವೇಷ್ಟು ಹೋರಾಟ ಮಾಡಿದ್ದೀರಿ ಎಂಬುದು ಗೊತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ ..

ಶ್ರೀ ಎಸ್. ಆರ್. ಬೊಮ್ಮಾಯಿ.—ಸಭೆ ಕರೆಯಬೇಕೆಂಬ ವಿಚಾರ ತಾವು ಹೇಳಿದ ಮೇಲೆ ನಾನು ಕರೆದಿಲ್ಲ. ಮೊದಲೇ ಸಭೆ ಕರೆದಿದ್ದೇನೆ. ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡುವ ನಿರ್ಧಾರ ಈ ಮೊದಲೇ ತೆಗೆದುಕೊಂಡಿದ್ದೇನೆ. ಇಲ್ಲಿ ಲೋಕೋಪಯೋಗಿ ಇಲಾಖೆ, ಅಗ್ರಿಕಲ್ಚರ್ ಆರ್ಟಿಕಲ್ಚರ್, ಕೋ ಆಪರೇಷನ್ ಇಲಾಖೆಗಳ ಸಹಾಯ ಬೇಕಾಗುತ್ತದೆ. ತಕ್ಷಣ ಅವರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದ್ದೇನೆ. ಇನ್ನೊಂದು ವಾರದಲ್ಲಿ ತೀರ್ಮಾನ ತೆಗೆದುಕೊಂಡು ಅವರಿಗೆ ಸಹಾಯ ಮಾಡತಕ್ಕಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ, —ಸ್ವಾಮಿ ಅಧ್ಯಕ್ಷರೇ ..

ಅಧ್ಯಕ್ಷರು.—ನೀವೇನೇ ಹೇಳಿದರೂ ಅದು ರೇಕಾರ್ಡ್‌ಗೆ ಹೋಗುವುದಿಲ್ಲ. don't record.

x x x

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ಮತ್ತು ಶ್ರೀ ಆರ್. ವೆಂಕಟರಾಮಯ್ಯನವರು ಸಭಾತ್ಯಾಗ ಮಾಡಿದರು)

---

x x x ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಲಿಲ್ಲ.